ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಕೋಲಾರ ಜಿಲ್ಲೆ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಶ್ರೀ ಡಿ. ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಶ್ರೀ ಬೈರತಿ ಸುರೇಶ್**
ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ
ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

# ಎಸ್. ಎಸ್. ಎಲ್. ಸಿ.
# ಪರೀಕ್ಷಾ ದೀವಿಗೆ

## ಪ್ರಥಮ ಭಾಷೆ : ಕನ್ನಡ

## 2024-25



ಕರ್ನಾಟಕ ಸರ್ಕಾರ

## ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್
## ಕೋಲಾರ ಜಿಲ್ಲೆ

# ಎಸ್. ಎಸ್. ಎಲ್. ಸಿ.
# ಪರೀಕ್ಷಾ ದೀವಿಗೆ

## ಪ್ರಥಮ ಭಾಷೆ : ಕನ್ನಡ

## 2024-25

**ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳವರ ಕಛೇರಿ**
ಜಿಲ್ಲಾಡಳಿತ ಭವನ, ರಾಷ್ಟ್ರೀಯ ಹೆದ್ದಾರಿ–75, ಟಮಕ ಅಂಚೆ, ಕೋಲಾರ –563103

# ಎಸ್.ಎಸ್.ಎಲ್.ಸಿ. ಪರೀಕ್ಷಾ ದೀವಿಗೆ

# 2024-25

## ಪರಿಕಲ್ಪನೆ ಮತ್ತು ಮಾರ್ಗದರ್ಶನ

**ಶ್ರೀ ಅಕ್ರಂ ಪಾಷ,** ಭಾ.ಆ.ಸೇ
ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ, ಕೋಲಾರ
ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ಕೋಲಾರ.

**ಶ್ರೀ ಕೃಷ್ಣಮೂರ್ತಿ**
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ.

**ಶ್ರೀ ರಾಜೇಶ್ ಡಿ. ಎಸ್.**
ಹಿರಿಯ ಭೂ ವಿಜ್ಞಾನಿಗಳು
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಕೋಲಾರ ಜಿಲ್ಲೆ.

**ಶ್ರೀ ಮುರಳಿ ಜಿ.**
ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಕೋಲಾರ ಜಿಲ್ಲೆ, ಕೋಲಾರ.

ಕೊಡುಗೆ : ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ, ಕೋಲಾರ ಜಿಲ್ಲೆ, ಕೋಲಾರ.

# ಸಾಹಿತ್ಯ ರಚನಾ ತಂಡ

| ಕ್ರ.ಸಂ | ಸಂಪನ್ಮೂಲ ವ್ಯಕ್ತಿಯ ಹೆಸರು ಶ್ರೀ/ಶ್ರೀಮತಿ | ಪದನಾಮ ಮತ್ತು ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|
| 1. | ಡಾ॥ ಸುದರ್ಶನ್ ಎನ್ | ಸಹಾಯಕ ನೋಡಲ್ ಅಧಿಕಾರಿಗಳು ಹಾಗೂ ಸಾಮಾನ್ಯ ವಿಜ್ಞಾನ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹುಮ್ನಾಬಾದ್ ಬೀದರ್ ಜಿಲ್ಲೆ. |
| 2. | ಫಕೀರಪ್ಪ ಮುದಗುರಿ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕನ್ನಡ ಭಾಷಾ ಶಿಕ್ಷಕರು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸಾಲಹಳ್ಳಿ, ಬೆಳಗಾವಿ ಜಿಲ್ಲೆ. |
| 3. | ವಿಶ್ವನಾಥ್ ಜಿ.ವಿ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಆಂಗ್ಲ ಭಾಷಾ ಶಿಕ್ಷಕರು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೆರೆಬೆಳಚಿ, ದಾವಣಗೆರೆ ಜಿಲ್ಲೆ. |
| 4. | ರವಿ ಚವ್ಹಾಣ್ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಹಿಂದಿ ಭಾಷಾ ಶಿಕ್ಷಕರು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸೇಡಂ, ಕಲಬುರ್ಗಿ ಜಿಲ್ಲೆ. |
| 5. | ಮಹಜರ್ ಹುಸೇನ್ ಪಟ್ವೇಗಾರ್ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಉರ್ದು ಭಾಷಾ ಶಿಕ್ಷಕರು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅಂಚಟಗೇರಿ-1, ಹುಬ್ಬಳ್ಳಿ, ಧಾರವಾಡ ಜಿಲ್ಲೆ |
| 6. | ಶಿವಪ್ಪ ತಳವಾರ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಗಣಿತ ಶಿಕ್ಷಕರು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹರಪ್ಪನಹಳ್ಳಿ, ವಿಜಯನಗರ ಜಿಲ್ಲೆ. |
| 7. | ಡಾ॥ ಗುರುಸ್ವಾಮಿ ಕೆ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮಾಜ ವಿಜ್ಞಾನ ಶಿಕ್ಷಕರು ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಕೊಡ್ಲಿಪೇಟೆ, ಕೊಡಗು ಜಿಲ್ಲೆ. |
| 8. | ಕಿರಣ್ ಮಲ್ಲೇಶಪ್ಪ ಜವಾಜಿ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಾಮಾನ್ಯ ವಿಜ್ಞಾನ ಶಿಕ್ಷಕರು, ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಮೇಲಿನಹನಸವಾಡಿ, ಶಿವಮೊಗ್ಗ ಜಿಲ್ಲೆ. |
| 9. | ಹರೀಶ ಹೆಚ್.ಜೆ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಗಣಕಯಂತ್ರ ಶಿಕ್ಷಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು. |
| 10. | ಸುಹಾಸ್ ಚಂದ್ರಶೇಖರ್ ಗರಗ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಆರ್ಟ್ ಮತ್ತು ಕ್ರಾಫ್ಟ್ ಶಿಕ್ಷಕರು, ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಮೇಲಿನಹನಸವಾಡಿ, ಶಿವಮೊಗ್ಗ ಜಿಲ್ಲೆ. |
| 11. | ಡಾ॥ ನಿತಿನ್ ಸಿಂಗ್ | ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ರೇವೂರ, ಕಲಬುರ್ಗಿ ಜಿಲ್ಲೆ |

## ಪರಿಶೀಲನೆ, ನಿರ್ವಹಣೆ ಮತ್ತು ಸಂಯೋಜನೆ

ಶ್ರೀ ಮುರಳಿ ಜಿ

ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಕೋಲಾರ ಜಿಲ್ಲೆ

**ಅಕ್ರಂ ಪಾಷ,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ.



# ಆಶಯ ನುಡಿ

ಕೋಲಾರ ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಶಾಲೆಗಳಿಂದ ಅಂದಾಜು 20,450 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆಯುತ್ತಿದ್ದು, ಗುಣಾತ್ಮಕ ಮತ್ತು ಶೇ.100 ರಷ್ಟು ಫಲಿತಾಂಶವನ್ನು ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ದಿಸೆಯಲ್ಲಿ ಜಿಲ್ಲೆಯಲ್ಲಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದು, ಎಲ್ಲಾ ವಿದ್ಯಾರ್ಥಿಗಳು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಬೇಕೆಂದು ಜಿಲ್ಲಾಡಳಿತವು ಹಲವು ವಿನೂತನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಹಿಂದಿನ ಸಾಲಿನಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವತಿಯಿಂದ ಜಿಲ್ಲೆಯಲ್ಲಿ ಹಲವಾರು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಎಲ್ಲಾ ಸರ್ಕಾರಿ ಶಾಲೆಗಳಿಗೆ ಹಂತಹಂತವಾಗಿ Interactive Smart Class, SSLC Workbooks ಮುಂತಾದವುಗಳನ್ನು ಒದಗಿಸಲಾಗಿದೆ.

ಅದರಂತೆಯೇ, ಪ್ರಸ್ತುತ ಸಾಲಿನಲ್ಲಿಯೂ ಸಹ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವತಿಯಿಂದ ಅತ್ಯುತ್ತಮ ಫಲಿತಾಂಶ ಸಾಧಿಸಲು ನೆರವಾಗುವ ದೃಷ್ಠಿಯಿಂದ ರಾಜ್ಯದ ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ರಚಿಸಲಾಗಿರುವ **"ಎಸ್.ಎಸ್.ಎಲ್.ಸಿ. ಪರೀಕ್ಷಾ ದೀವಿಗೆ"** ಎಂಬ ಕೈಪಿಡಿಗಳನ್ನು ಎಲ್ಲಾ ವಿಷಯಗಳಲ್ಲಿ ರಚಿಸಿ, ಎಲ್ಲಾ ಸರ್ಕಾರಿ ಶಾಲೆಗಳಿಗೆ ವಿತರಿಸಲು ಹರ್ಷವೆನಿಸುತ್ತಿದೆ. ಈ ಕೈಪಿಡಿಯು ಎಲ್ಲಾ ವಿದ್ಯಾರ್ಥಿಗಳಿಗೂ ಕೂಡ ತುಂಬಾ ಉಪಯುಕ್ತವಾಗಿದೆ. ಈ ಕೈಪಿಡಿಗಳನ್ನು ರಚಿಸಲು ಅಗತ್ಯ ಶ್ರಮ ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಶುಭವಾಗಲಿ ಎಂದು ಹಾರೈಸುತ್ತೇನೆ.



**ಅಕ್ರಂ ಪಾಷ,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ಗದ್ಯ ಭಾಗ – 01 : ನಮ್ಮ ಭಾಷೆ | 01–02 |
| 2. | ಗದ್ಯ ಭಾಗ – 02 : ವ್ಯಾಘ್ರಗೀತೆ | 03–04 |
| 3. | ಗದ್ಯ ಭಾಗ – 03 : ಶಬರಿ | 05–07 |
| 4. | ಗದ್ಯ ಭಾಗ – 04 : ಲಂಡನ್ ನಗರ | 08–09 |
| 5. | ಗದ್ಯ ಭಾಗ – 05 : ಭಾಗ್ಯ ಶಿಲ್ಪಿಗಳು | 10–12 |
| 6. | ಗದ್ಯ ಭಾಗ – 06 : ಯುದ್ಧ | 13–14 |
| 7. | ಗದ್ಯ ಭಾಗ – 07 : ಅಗ್ನಿಭೂತಿ ವಾಯುಭೂತಿಯರ ಕತೆ | 15–16 |
| | | |
| 8. | ಪದ್ಯ ಭಾಗ – 01 : ಸಂಕಲ್ಪ ಗೀತೆ | 17–20 |
| 9. | ಪದ್ಯ ಭಾಗ – 02 : ಹಕ್ಕಿ ಹಾರುತಿದೆ ನೋಡಿದಿರಾ | 21–25 |
| 10. | ಪದ್ಯ ಭಾಗ – 03 : ಹಲಗಲಿ ಬೇಡರು | 26–29 |
| 11. | ಪದ್ಯ ಭಾಗ – 04 : ಕೌರವೇಂದ್ರನ ಕೊಂದೆ ನೀನು | 30–33 |
| 12. | ಪದ್ಯ ಭಾಗ – 05 : ಹಸುರು | 34–37 |
| 13. | ಪದ್ಯ ಭಾಗ – 06 : ಛಲಮನೆ ಮರೆವೆಂ | 38–40 |
| 14. | ಪದ್ಯ ಭಾಗ – 07 : ವೀರಲವ | 41–43 |
| 15. | ಪದ್ಯ ಭಾಗ – 08 : ಕೆಮ್ಮನೆ ವೀಸೆವೊತ್ತನೇ | 44–47 |

| ಪೂರಕ ಪಾಠಗಳು | | |
|---|---|---|
| 1. | ಪಾಠ – 01 : ವಸಂತ ಮುಖ ತೋರಲಿಲ್ಲ | 48 |
| 2. | ಪಾಠ – 02 : ಭಗತ್ ಸಿಂಗ್ | 49–50 |
| 3. | ಪಾಠ – 03 : ಉದಾತ್ತ ಚಿಂತನೆಗಳು | 51–52 |
| 4. | ಪಾಠ – 04 : ವಚನಗಳು | 53 |
| 5. | ಪಾಠ – 05 : ನಾನು ಪ್ರಾಸ ಬಿಟ್ಟ ಕತೆ | 54–55 |
| 6. | ಪಾಠ – 06 : ಶುಕನಾಸನ ಉಪದೇಶ | 56 |
| 7. | ವ್ಯಾಕರಣ ಭಾಗ | 57–62 |
| 8. | ಹಿಂದಿನ ವರ್ಷದ ಪರೀಕ್ಷಾ ಮಂಡಳಿಯ ಮಾದರಿ ಪ್ರಶ್ನೋತ್ತರಗಳು | 63–86 |

# ಗದ್ಯ ಭಾಗ-01 : ನಮ್ಮ ಭಾಷೆ

**ಕವಿ ಪರಿಚಯ**

ಎಂ. ಮರಿಯಪ್ಪಭಟ್ಟ ಕ್ರಿ.ಶ. 1906ರಂದು ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಕೃತಿಗಳು-ತುಳು-ಇಂಗ್ಲಿಷ್ ನಿಘಂಟು, ಅಭಿನವ ಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ ಪ್ರಶಸ್ತಿ-ಕರ್ನಾಟಕ ಸರ್ಕಾರದ ಪುರಷ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಪ್ರಕೃತ ಈ ಪಾಠವನ್ನು **'ಕನ್ನಡ ಸಂಸ್ಕೃತಿ'** ಕೃತಿಯಿಂದ ಆಯ್ಕೆ ಮಾಡಲಾಗಿದೆ.

**I. ಒಂದು ವಾಕ್ಯದಲ್ಲಿ ಉತ್ತರಿಸಿ**

**1. ಭಾಷೆ ಯಾವುದಕ್ಕೆ ಸಾಧನವಾಗಿದೆ?**

**ಉತ್ತರ** : ಭಾಷೆ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ವಿಚಾರ ವಿನಿಮಯ ಮಾಡಲಿಕ್ಕೆ ಸಹಾಯಕವಾಗಿದೆ.

**2. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ ?**

**ಉತ್ತರ** : ಪ್ರಾಣಿಗಳು ಚಲನವಲನ ವಿಷಯವಾಗಿ ಹಾಗೂ ಆಹಾರ ವಿಚಾರವಾಗಿ

**3. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು ?**

**ಉತ್ತರ** : ಮನುಷ್ಯನು ಸಂಚಾರಿ ಜೀವನ ಬಿಟ್ಟು ಒಂದು ಕಡೆ ನೆಲಿಸಿದಾಗ.

**4. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?**

**ಉತ್ತರ** : ಕವಿ ನಯಸೇನ

**II. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ**

**1. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು?**

**ಉತ್ತರ** : ಮಾನವನಿಗೆ ಬಿಡುವು ಹೆಚ್ಚಿದಂತೆ ಜೀವನದ ಸೌಕರ್ಯಗಳನ್ನು ವಿಶಿಷ್ಠ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಸುಖ ದು:ಖ ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡು ಸಾಹಿತ್ಯವನ್ನು ವಿವಿಧ ಆಯಾಮದಲ್ಲಿ ಬೆಳೆದು ಜ್ಞಾನಭಂಡಾರ ಅಧಿಕವಾಯಿತು.

**2. ವ್ಯವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?**

**ಉತ್ತರ** : ವ್ಯವಹಾರಿಕ ಭಾಷೆಯಲ್ಲಿ ಜನರು ಮಾತನಾಡುತ್ತಾರೆ ಕನ್ನಡ, ತಮಿಳು, ತೆಲಗು, ತುಳು, ಮರಾಠಿ, ಉರ್ದು, ಇಂಗಿಷ್ ಇದಕ್ಕೆ ಉದಾಹರಣೆ ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ರಚನೆಯಲ್ಲಿ ಉಪಯೋಗವಾಗದ ಭಾಷೆ. ಎಲ್ಲಾ ಗ್ರಾಂಥಿಕ ಭಾಷೆಗಳು ಇಂದು ವ್ಯವಹಾರಿಕವಾಗಿ ಇಲ್ಲಾ ಉದಾಹರಣೆಗೆ ದೇವ ಭಾಷೆ ಎನಸಿಕೊಂಡ ಸಂಸ್ಕೃತ ಭಾಷೆ ಗ್ರಾಂಥಿಕ ಭಾಷೆಯಾಗಿ ಮಾರ್ಪಟ್ಟಿದೆ.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1. "ಸಂಸ್ಕೃತಿಯ ಇತಿಹಾಸ ಉಳಿಯಿತು"

**ಆಯ್ಕೆ** : ಎಂ. ಮರೆಯಪ್ಪಭಟ್ಟ ಬರೆದಿರುವ ನಮ್ಮ ಭಾಷೆ ಪಾಠವನ್ನು ಕನ್ನಡ ಸಂಸ್ಕೃತಿ ಪಾಠದಿಂದ ಆರಿಸಲಾಗಿದೆ.

**ಸಂದರ್ಭ** : ನವಶಿಲಾಯುಗದ ಮಾನವ ಸಂಚಾರಿ ಜೀವನವನ್ನು ತ್ಯಜಿಸಿ ಒಂದೇ ಕಡೆ ನೆಲೆ ನಿಂತು ಬದಕನ್ನು ಅಭಿವೃದ್ಧಿಗೊಳಿಸುತ್ತ ಹೊದಂತೆ ತನ್ನ ಆಗು ಹೋಗುಳನ್ನು ಸುಖದು:ಖಗಳನ್ನು ಕಾವ್ಯರೂಪದಲ್ಲಿ ಇಳಿಸುವ ಮಾರ್ಗವನ್ನು ಕಂಡುಕೊಂಡನು ಸುಂದರವಾದ ಸಾಹಿತ್ಯವನ್ನು ಕಲಿತುಕೊಂಡು ಲಿಪಿಯ ಮೂಲಕ ಪರಂಪರೆಯಿಂದ ಜ್ಞಾನಭಂಡಾರ ಭದ್ರವಾಯಿತು.

**ಸ್ವಾರಸ್ಯ** : ಭಾಷೆ ನಾಡಿನ ಪರಂಪರೆ ಸಂಸ್ಕೃತ ಇತಿಹಾಸವನ್ನು ಉಳಿಸಲು ಬೆಳೆಸಲು ಸಹಾಯಕವಾದ ಸ್ವಾರಸ್ಯ ವ್ಯಕ್ತವಾಗಿದೆ.

2 "ಒಬ್ಬ ತಾಯಿ ಗಾನದ ಶ್ರುತಿಯಂತೆ"

**ಆಯ್ಕೆ** : ಎಂ.ಮರೆಯಪ್ಪಭಟ್ಟ ಬರೆದಿರುವ ನಮ್ಮ ಭಾಷೆ ಪಾಠವನ್ನು ಕನ್ನಡ ಸಂಸ್ಕೃತಿ ಪಾಠದಿಂದ ಆರಿಸಲಾಗಿದೆ.

**ಸಂದರ್ಭ** : ಭಾಷೆಗಳಲ್ಲಿ ಮೇಲುಕೀಳು ಎಂಬುದಿಲ್ಲ ನಾಲ್ಕುಜನ ಮಾತನಾಡುತ್ತಿದ್ದ ಭಾಷೆಗೆ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ಯ ಹಾಗೂ ಸತ್ಯದೃಷ್ಟಿಯಿಂದ ಅಂತರವಿಲ್ಲಾ ಒಬ್ಬ ತಾಯಿಯ ಗಾನದ ಶ್ರತಿಯಂತೆ ಎಂಬುದರ ಸ್ವಾರಸ್ಯ ರೂಪದಲ್ಲಿ ಬಂದಿದೆ.

**ಸ್ವಾರಸ್ಯ** : ಭಾಷೆಯನ್ನು ಪ್ರೀತಿಸಬೇಕು ಗೌರವಿಸಬೇಕು ಅನ್ಯಭಾಷೆಯನ್ನು ತಿರಸ್ಕರಿಸಬಾರದು ಎಂಬುದನು ಭಾಷಾ ವೈವಿಧ್ಯತೆಯನ್ನು ಸ್ವಾರಸ್ಯ ರೂಪದಲ್ಲಿ ಹೇಳಲಾಗಿದೆ.

* * *

# ಗದ್ಯ ಭಾಗ–02 : ವ್ಯಾಘ್ರಗೀತೆ

**ಕವಿ ಪರಿಚಯ**

ಎ. ಎನ್. ಮೂರ್ತಿರಾವ್ ರವರು ಕ್ರಿ.ಶ.1900ರಲ್ಲಿ ಮಂಡ್ಯಜಿಲ್ಲೆ ಅಕ್ಕಿ ಹೆಬ್ಬಾಳದಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳ ನರಸಿಂಹಮೂರ್ತಿರಾವ. ಕೃತಿಗಳು ಹಗಲುಗನಸುಗಳು, ಅಲೆಯುವಮನ, ಅಪರ ವಯಸ್ಕನ ಅಮೆರಿಕಾ ಯಾತ್ರೆ, ಮಿನಗುಮಿಂಚು, ಪೂರ್ವಸೂರಿಗಳೊಡನೆ, ಚಂಡಮಾರುತ ಪ್ರಶಸ್ತಿ ಚಿತ್ರಗಳು ಪತ್ರಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ ನೀಡಲಾಗಿದೆ.

ಆಯ್ಕೆ ಗ್ರಂಥ ಎ.ಎನ್.ಮೂರ್ತಿರಾವ ಅವರು ವ್ಯಾಘ್ರಗೀತೆ ಪಾಠವನ್ನು ಸಮಗ್ರ ಲಲಿತ ಪ್ರಬಂಧಗಳು ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

**1. ಭಗವದ್ಗೀತೆಯನ್ನು ರಚಿಸಿದವರು ಯಾರು?**

**ಉತ್ತರ** : ವೇದವ್ಯಾಸರು

**2. ಹುಲಿಗೆ ಪರಮಾನಂದವಾಗಲು ಕಾರಣವೇನು?**

**ಉತ್ತರ** : ಶಾನಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು

**3. ಶಾನಭೋಗರ ಬ್ರಹ್ಮಾಸ್ತ್ರ ಯಾವುದು?**

**ಉತ್ತರ** : ಖಿರ್ದಿ ಪುಸ್ತಕ

**4. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**

**ಉತ್ತರ** : ವಿಧಿ ಇಂದು ಆಹಾರಕ್ಕೆ ಏನೇನು ಒದಗಿಸುವದೊ ಎಂದು ಭಾವಿಸಿತ್ತು.

## II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ

**1. ಮದಲಿಂಗನ ಕಣಿವೆಯಲ್ಲಿ ದಾಟ ಬರುವಾಗ ಶಾನಭೋಗರು ಏನೆಂದು ಯೋಚಿಸಿದರು?**

**ಉತ್ತರ** : ಮದಲಿಂಗನ ಕಣಿವೆಯಲ್ಲಿ ಬೆಳದಿಂಗಳ ಕಾಡುದಾರಿ, ಸ್ವಲ್ಪ ಬೇಗಬೇಗ ಹೆಜ್ಜೆ ಹಾಕಿದರೆ ಸಾಕಾಗಿತ್ತು. ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದಾಗಿತ್ತು ಎಂದು ಯೋಚಿಸಿದರು.

**2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರುಲು ಕಾರಣವೇನು ?**

**ಉತ್ತರ** : ಹುಲಿಯು ಹಿಂದಿನಿಂದ ಹಾರಿ ಕೊಲ್ಲುದಿರಲು ಕಾರಣ ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಂದರೆ ಹುಲಿಗಳ ಧರ್ಮಕ್ಕೆ ಕುತ್ತು ಬರಬಹುದು ಎಂದು ಹುಲಿಯ ಕೊಲ್ಲದಿರಲು ಕಾರಣವಾಗಿತ್ತು.

3. **ಶಾನಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ?**

**ಉತ್ತರ** : ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತೆಗೆದುಕೊಂಡು ಹೋಗಿದ್ದ ಕೆಲವು ರೈತರು ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಮರಳುವಾಗ ಹುಲಿಯ ಧ್ವನಿಯ ಕೇಳಿ ನಿಂತಾಗ ರೈತರು ತಮ್ಮ ಕೋವಿನಿಂದ ಎರಡು ತೋಟಾಹಾರಿಸಿ ಹುಲಿಯನ್ನು ಫಲಾಯನ ಮಾಡುವಂತೆ ಮಾಡಿದ್ದರು.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1. **ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

**ಆಯ್ಕೆ** : ಎ.ಎನ್. ಮೂರ್ತಿರಾವ್ಬರೆದಿರುವ ವ್ಯಾಘ್ರಗೀತೆ ಪಾಠವನ್ನು ಸಮಗ್ರ ಲಲಿತ ಪ್ರಬಂಧಗಳು ಕೃತಿಯಿಂದ ಆರಿಸಲಾಗಿದೆ.

**ಸಂದರ್ಭ** : ಶಾನಭೋಗರು ಹುಲಿಯ ಬಾಯಿಂದ ತಪ್ಪಿಸಿಕೊಂಡಾಗ ಹುಲಿಯ ಅಸಾಯಕತೆ ಅರಿವಾಗಿ ವೈರಿಯನ್ನು ಹಿಂದಿನಿಂದ ಹಾರಿ ಕೊಲ್ಲಲು ಯೋಚನೆ ಮಾಡಿತು. ಆದರೆ ಪುಣ್ಯಕೋಟಿಯ ಕಥೆಯಲ್ಲಿ ಅವರ ಅಜ್ಜ ನೆನಪಾಗಿ ಹೇಳುವ ಸಂದರ್ಭದಲ್ಲಿ ಬಂದಿದೆ.

**ಸ್ವಾರಸ್ಯ** : ಹುಲಿ ಸತ್ಯಧರ್ಮವನ್ನುಪರಿಪಾಲಿಸುವುದು ಸ್ವಾರಸ್ಯ ರೂಪದಲ್ಲಿ ವ್ಯಕ್ತವಾಗಿದೆ.

2 **"ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"**

**ಆಯ್ಕೆ** : ಎ.ಎನ್. ಮೂರ್ತಿರಾವ್ ಬರೆದಿರುವ ವ್ಯಾಘ್ರಗೀತೆ ಪಾಠವನ್ನು ಸಮಗ್ರ ಲಲಿತ ಪ್ರಬಂಧಗಳು ಕೃತಿಯಿಂದ ಆರಿಸಲಾಗಿದೆ.

**ಸಂದರ್ಭ** : ಶಾನಭೋಗರು ಹುಲಿಯ ಬಾಯಿಂದ ತಪ್ಪಿಸಿಕೊಳ್ಳುವಾಗ ಅವರಿಗೆ ಕುಲಾಲ ಚಕ್ರದಂತೆ ತಿರುಗುತ್ತಿರುವಾಗ ದೇವರೆ ಮರ ಹತ್ತುವಷ್ಟು ಅವಕಾಶವನ್ನಾದರು ದಯಪಾಲಿಸುವ ಎನ್ನುವ ಸಂದರ್ಭದಲ್ಲಿ ಬಂದಿರುತ್ತದೆ.

**ಸ್ವಾರಸ್ಯ** : ಶಾನಭೋಗರು ಹುಲಿಯಿಂದ ಪಾರಾಗುವಾಗ ಎಲ್ಲಾ ರೀತೀಯ ಪ್ರಯತ್ನ ಪಡುವುದು ಸ್ವಾರಸ್ಯ ರೂಪದಲ್ಲಿ ವ್ಯಕ್ತವಾಗಿದೆ.

* * *

# ಗದ್ಯ ಭಾಗ–03 : ಶಬರಿ

**ಕವಿ ಪರಿಚಯ**

ಪು.ತಿ.ನ. ಕಾವ್ಯನಾಮ ಹೊಂದಿದ ಇವರು ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಪೂರ್ಣ ಹೆಸರು ಪಡೆದಕೊಂಡು ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಜನಿಸಿದರು. ಪ್ರಮುಖ ಕೃತಿಗಳೆಂದರೆ–ಅಹಲ್ಯೆ, ಶಬರಿ, ಹಣತೆ, ವಿಕಟಕವಿ ವಿಜಯ, ಗೋಕುಲ ನಿರ್ಗಮನ, ಗಣೇಶ ದರ್ಶನ, ಶಾರದಯಾಮಿನಿ. ಮುಂ. ಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ ಆಯ್ಕೆ ಗ್ರಂಥ ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

**1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು? (2022–23 ವಾರ್ಷಿಕ ಪರೀಕ್ಷೆ)**

**ಉತ್ತರ** : ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ 'ಶಬರಿ'.

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**

**ಉತ್ತರ** : ಶ್ರೀರಾಮನಿಗೆ ಸಮರ್ಪಿಸಲು ಶಬರಿ ಹಣ್ಣು– ಹಂಪಲು, ಹೂ, ತಳಿರುಗಳನ್ನು ಸಂಗ್ರಹಿಸಿದ್ದಳು.

**3. ಶ್ರೀರಾಮನ ತಂದೆಯ ಹೆಸರೇನು?**

**ಉತ್ತರ** : ಶ್ರೀರಾಮನ ತಂದೆಯ ಹೆಸರು ದಶರಥ.

**4. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**

**ಉತ್ತರ** : ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು.

**5. "ಶಬರಿ" ಗೀತನಾಟಕದ ಕರ್ತೃ ಯಾರು?**

**ಉತ್ತರ** : "ಶಬರಿ" ಗೀತನಾಟಕದ ಕರ್ತೃ ಪು.ತಿ. ನರಸಿಂಹಚಾರ್.

## II. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

**ಉತ್ತರ** : ರಾಮನು 'ಎಲೈ ಗಿರಿವನವೇ ನಾನು ನಿಮ್ಮನ್ನು ಬೇಡಿಕೋಳ್ಳುತ್ತಿದ್ದೇನೆ ಹೇಳಿರಿ ನನ್ನ ಪ್ರೀತಿಯ ರಾಣಿ ಸೀತೆಯು ದೊರೆಯುವಳೇ? ಅವಳು ಇರುವ ನೆಲೆ ಯಾರಾದರೂ ತಿಳಿದಿರುವಿರಾ. ನನ್ನ ಹೃದಯದ ದುಃಖವು ನಾಶವಾಗುತ್ತಿಲ್ಲವಲ್ಲ'. ಎಂದು ಗಿರಿವನವನ್ನು ಕೇಳುತ್ತಾನೆ.

2. **ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**

**ಉತ್ತರ** : ಲಕ್ಷ್ಮಣ 'ತಾಳಿಕೋ ಅಣ್ಣ ತಾಳಿಕೋ ಸೂರ್ಯನೇ ಕಾಂತಿ ಕಳೆದುಕೊಂಡರೆ ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯ ಕಳೆದುಕೊಂಡರೆ ಈ ಲೋಕಕ್ಕೆ ಧೈರ್ಯ ನೀಡುವವರು ಯಾರು?' ಎಂದು ಅಣ್ಣನನ್ನು ಸಂತೈಸಿದನು.

3. **ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

**ಉತ್ತರ** : ಶಬರಿಯು ರುಚಿಯಾದ ಹಣ್ಣು ಹಂಪಲುಗಳನ್ನು, ಜೇನುತುಪ್ಪ, ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ತಳಿರು, ಸುವಾಸನೆಯಿಂದ ಕುಡಿರುವ ಹೂವುಗಳನ್ನು ಸಿದ್ಧತೆಮಾಡಿಕೊಂಡಿದ್ದಳು.

4. **ಆತಿಥ್ಯ ಸ್ವೀಕರಿಸಿದ ರಾಮ–ಲಕ್ಷ್ಮಣರು ಶಬರಿಗೆ ಏನು ಹೇಳಿದರು?**

**ಉತ್ತರ** : ತಾಯಿ ನಿನ್ನ ಪ್ರೀತಿಯ ಸುಖದಲ್ಲಿ ನಾವು ಸುಖಿಗಳು, ಕಾಡಿನಲ್ಲೂ ಇದ್ದರು ಆದರಾತಿಥ್ಯ ದೊರೆಯುತ್ತಿರಲಿಲ್ಲಾ ಎಂದು ಹೇಳಿದರು.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1. **"ಆವುದೀ ಮರಳು? ನಮ್ಮೆಡೆಗೆ ಬರುತಿಹುದು".**

**ಆಯ್ಕೆ** : ಈ ವಾಕ್ಯವನ್ನು ಪು.ತಿ.ನ. ಅವರು ರಚಿಸಿರುವ 'ಶಬರಿ' ಎಂಬ ಪಾಠವನ್ನು ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಸೀತೆಯನ್ನು ಹುಡುಕುತ್ತಾ ಬರುವಾಗ ಶಬರಿಯನ್ನು ನೋಡಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ಶ್ರೀ ರಾಮನ ದರ್ಶನಕ್ಕಾಗಿ ಕಾದು, ಕಾತರಿಸಿ, ಹುಚ್ಚಿಯಂತೆ ಆಗಿದ್ದ ಶಬರಿಯನ್ನು ಕಂಡು ರಾಮ ಲಕ್ಷ್ಮಣರು ಭಯಗೊಂಡಿದ್ದನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

2. **"ನಾಚುತಿಹೆನೇ ಪೂಜೆಯೀ ನಲಮೆಯಿಂದ"**

**ಆಯ್ಕೆ** : ಈ ವಾಕ್ಯವನ್ನು ಪು.ತಿ.ನ. ಅವರು ರಚಿಸಿರುವ 'ಶಬರಿ' ಎಂಬ ಪಾಠವನ್ನು ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ.

**ಸ್ವಾರಸ್ಯ** : ಶಬರಿ ಪೂಜೆಯಿಂದ ಹಾಗೂ ಪ್ರೀತಿಯಿಂದ ನೆನೆಯುತ್ತ, ಹಂಬಲಿಸುತ್ತಾ, ಇರುವ ಸನ್ನಿವೇಶ ನೋಡಿ ರಾಮನು ಈ ಪೂಜ್ಯಳ ಅನುರಾಗದಿಂದ ನೋಡಿ ನಾನು ನಾಚುತ್ತಿರುವೆನು ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

3. **"ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ "**

**ಆಯ್ಕೆ** : ಈ ವಾಕ್ಯವನ್ನು ಪು.ತಿ.ನ. ಅವರು ರಚಿಸಿರುವ 'ಶಬರಿ' ಎಂಬ ಪಾಠವನ್ನು ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಶಬರಿಯ ಉಪಚಾರದಿಂದ ಸಂತೃಪ್ತನಾದ ರಾಮ "ಇದು ನಮ್ಮ ಮನೆಯಂತೆ, ನೀವು ನಮ್ಮ ತಾಯಿಯಂತೆ" ಎಂದು ಹೇಳಿದಳು.

**ಸ್ವಾರಸ್ಯ** : "ರಾಮ ನಿನ್ನ ರೂಪದಂತೆ ಮಾತು ಕೂಡ ಎನಿತು ಉದಾರವಾಗಿದೆ" ಎಂದು ಹೇಳುವ ಮೂಲಕ ಶಬರಿಯು ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ.

4. **"ಬೆಳಕಿ ಗೋಲಿದವರ್ ಉರಿವ ಬತ್ತಿಯ ಕರುಕ ಕಾಣರು."**

**ಆಯ್ಕೆ** : ಈ ವಾಕ್ಯವನ್ನು ಪು.ತಿ.ನ. ಅವರು ಬರೆದಿರುವ 'ಶಬರಿ' ಎಂಬ ಪಾಠವನ್ನು ಏಕಾಂಕ ನಾಟಕದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳಿದ್ದಾನೆ. ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮೋಕ್ಷಕ್ಕೆ ಗುರಿಯಾಗುತ್ತಾಳೆ, ಲಕ್ಷ್ಮಣನು ಶಬರಿಯ ಬಗ್ಗೆ ಮಗುವಿನಂತೆ ಒಲಿಯುವ ಗುಣಗಾನ ಮಾಡಿದಾಗ ರಾಮ ಈ ಮೇಲಿನ ವಾಕ್ಯದಂತೆ ಹೇಳುತ್ತಾನೆ.

**ಸ್ವಾರಸ್ಯ** : "ಬೆಳಕನ್ನು ಇಷ್ಟಪಡುವವರು ಉರಿಯುವ ಬತ್ತಿಯ ಕರಕನ್ನು ನೋಡುವುದಿಲ್ಲಾ" ಎಂಬ ಮಾತು ಶಬರಿಯ ರಾಮ ಭಕ್ತಿಯ ಶ್ರೇಷ್ಠತೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವಿವರಿಸಲಾಗಿದೆ.

* * *

# ಗದ್ಯ ಭಾಗ-04 : ಲಂಡನ್ ನಗರ

**ಕವಿ ಪರಿಚಯ:-**

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ॥ ವಿನಾಯಕ ಕೃಷ್ಣ ಗೋಕಾಕ ಇವರು 1909ರಲ್ಲಿ ಹಾವೇರಿ ಜಿಲ್ಲೆ ಸವಣೂರಿನಲ್ಲಿ ಜನಿಸಿದರು. ಇವರ ಕೃತಿಗಳು-ಪಯಣ, ಉಗಮ, ಇಜ್ಜೋಡು, ಸಮುದ್ರ ಗೀತೆಗಳು, ಸಮರಸವೇ ಜೀವನ, ಭಾರತ ಸಿಂಧು ರಶ್ಮಿ. ಪ್ರಶಸ್ತಿ- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ, ಪದ್ಮಶ್ರೀ, ದೊರೆತಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?**

**ಉತ್ತರ** : ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು "ವೂಲವರ್ಥ" ಸ್ಟೇಷನರಿ ಅಂಗಡಿ

**2. ನೆಲ್ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರೇನು?**

**ಉತ್ತರ** : ನೆಲ್ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್

**3. 'ವೆಸ್ಟ್ ಮಿನಿಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?**

**ಉತ್ತರ** : 'ವೆಸ್ಟ್ ಮಿನಿಸ್ಟರ್ ಅಬೆ' ಸಂತರು, ಸಾರ್ವಭೌಮರು ಹಾಗೂ ಕವಿ ಪುಂಗರವರ ಸ್ಮಾರಕವಾಗಿದೆ.

**4. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?**

**ಉತ್ತರ** : ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ 'ಚೇರಿಂಗ್ ಕ್ರಾಸ್'

## II. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**

**ಉತ್ತರ** : ಬೂಟು, ಕಾಲು ಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿಗಳು.

**2. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**

**ಉತ್ತರ** : ಲಂಡನ್ನಿನ ಎಲ್ಲಾ ಅಂಗಡಿಗಳಲ್ಲಿ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಅಮ್ಮಣಿಗಳಿರುತ್ತಾರೆ. ಲಂಡನ್ನಿನ ಯಾವುದಾದರೂ ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ಸೀಟು ಹುಡುಕಿ ಕೊಡುವವರು ಹೆಣ್ಣು ಮಕ್ಕಳು ಈ ರೀತಿ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ.

**3. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**

**ಉತ್ತರ** : ಒಂದು ಟೊಪ್ಪಿಗೆಯಂತೆ ಇನ್ನೊಂದು ಟೊಪ್ಪಿಗೆ ಇರುವುದಿಲ್ಲಾ, ಕನಿಷ್ಟ ಪಕ್ಷ ಟೊಪ್ಪಿಗಿಗೆ ಸಿಕ್ಕಿಸಿದ ಪುಚ್ಚವಾದರೂ ಬೇರೆಯಾಗಿರುತ್ತದೆ.

4. **ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ ?**

**ಉತ್ತರ** : ಪೊಯೆಟ್ ಕಾರ್ನರ್‌ನಲ್ಲಿ ವರ್ಡ್ಸ್‌ವರ್ತ, ಕಿಪ್ಲಿಂಗ್, ಮ್ಯಾಕಾಲೆ, ಜಾನ್ಸನ್, ಗೋಲ್ಡ್‌ಸ್ಮಿತ್, ಡ್ರಾಯಡನ್. ಸಮಾಧಿಗಳಿವೆ.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1 **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ".**

**ಆಯ್ಕೆ** : ಈ ವಾಕ್ಯವನ್ನು ವಿ.ಕೃ. ಗೋಕಾಕ ಬರೆದಿರುವ ಲಂಡನ್ ನಗರ ಪಾಠವನ್ನು ಸಮುದ್ರದಾಚೆಯಿಂದ ಪ್ರವಾಸ ಕಥನದಿಂದ ಆರಿಸಲಾಗಿದೆ.

**ಸಂದರ್ಭ** : ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿರುವ ಶಿಲಾಮೂರ್ತಿಗಳ ದರ್ಶನ ಮಾಡಿದ ಸಂದರ್ಭದಲ್ಲಿ "ತಮ್ಮ ದೇಶಕ್ಕಾಗಿ ದುಡಿದ ಇತಿಹಾಸ ಪ್ರಸಿದ್ಧ ಪುರುಷರ ಶಿಲಾಪ್ರತಿಮೆಗಳು ಕೈಯೆತ್ತಿ ಈ ಮಾತನ್ನು ಹೇಳುವಂತೆ ತೋರುತ್ತದೆ".

**ಸ್ವಾರಸ್ಯ** : ಇಂಗ್ಲೆಂಡ್ ದೇಶದ ಜನರ ರಾಷ್ಟ್ರಪ್ರೇಮ ಹಾಗೂ ಐತಿಹಾಸಿಕ ಪ್ರಜ್ಞೆಯ ದ್ಯೋತಕವಾಗಿದೆ.

2. **''ಹೊತ್ತು ! ಹೊತ್ತು ! ಹೊತ್ತೇ ಹಣ"**

**ಆಯ್ಕೆ** : ಈ ವಾಕ್ಯವನ್ನು ವಿ.ಕೃ. ಗೋಕಾಕ ಬರೆದಿರುವ ಲಂಡನ್‌ನಗರ ಪಾಠವನ್ನು ಸಮುದ್ರದಾಚೆಯಿಂದ ಪ್ರವಾಸ ಕಥನದಿಂದ ಆರಿಸಲಾಗಿದೆ.

**ಸಂದರ್ಭ** : ಲೇಖಕರು ಲಂಡನ್ನಿನ ಬೀದಿಗಳಲ್ಲಿ ಲಕ್ಷಾನುಲಕ್ಷ ಜನರು ಸದಾ ಅವಸರದಿಂದ ಓಡಾಡುವುದನ್ನು ನೋಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ** : ಸಮಯವನ್ನು ವ್ಯರ್ಥಮಾಡದೆ ಹಣದಂತೆ ಸದುಪಯೋಗಪಡಿಸಿಕೊಳ್ಳುತ್ತಾರೆ ಎಂಬುದು ಇಲ್ಲಿನ ಸ್ವಾರಸ್ಯಪೂರ್ಣವಾಗಿ ಬಂದಿದೆ.

3. **"ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"**

**ಆಯ್ಕೆ** : ಈ ವಾಕ್ಯವನ್ನು ವಿ.ಕೃ. ಗೋಕಾಕ ಬರೆದಿರುವ ಲಂಡನ್ ನಗರ ಪಾಠವನ್ನು ಸಮುದ್ರದಾಚೆಯಿಂದ ಪ್ರವಾಸ ಕಥನದಿಂದ ಆರಿಸಲಾಗಿದೆ.

**ಸಂದರ್ಭ** : ಲೇಖಕರು ತಮ್ಮ ಪ್ರವಾಸದ ವರ್ಣನೆಯನ್ನು ಮುಕ್ತಾಯ ಮಾಡುವ ಸಂದರ್ಭದಲ್ಲಿ ಬೇಕನ್ನನ ಈ ಮಾತನ್ನು ನೆನಪು ಮಾಡಿಕೊಳ್ಳುತ್ತಾರೆ.

**ಸ್ವಾರಸ್ಯ** : ಪ್ರವಾಸದಿಂದ ಮನಸ್ಸು ವಿಕಾಸ ಹೊಂದುತ್ತದೆ; ದೃಷ್ಟಿಯು ವಿಶಾಲವಾಗುತ್ತದೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

* * *

# ಗದ್ಯ ಭಾಗ–05 : ಭಾಗ್ಯ ಶಿಲ್ಪಿಗಳು

**ಕವಿ ಪರಿಚಯ:–**

ಡಿ. ಎಸ್. ಜಯಪ್ಪಗೌಡ ಇವರು 1947ರಂದು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ ಇವರು ಕೃತಿಗಳು–ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು, ದಿವಾನ ಸರ್. ಎಂ.ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು. ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಪ್ರಶಸ್ತಿ–ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

1. **ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ಧರಾದರು?**

   **ಉತ್ತರ** : ನಾಲ್ವಡಿ ಕೃಷ್ಣರಾಜ ಒಡೆಯರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು.

2. **ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?**

   **ಉತ್ತರ** : ಏಷ್ಯಾ ಖಂಡದಲ್ಲಿ ಮೊದಲ ಶಿವನ ಸಮುದ್ರ ಬಳಿ ಕಾವೇರಿ ಜಲವಿದ್ಯುತ್ ಯೋಜನೆಯಾಗಿದೆ.

3. **ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

   **ಉತ್ತರ** : ನಾಲ್ವಡಿ ಕೃಷ್ಣರಾಜ ಒಡೆಯರ್ ದಿವಾನರಾಗಿ ನೇಮಿಸಿದರು.

4. **ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**

   **ಉತ್ತರ** : ಎಂಜಿನಿಯರ್ ದಿನಾಚರಣೆಯನ್ನಾಗಿ ಮಾಡಲಾಗುತ್ತಿದೆ.

5. **ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?**

   **ಉತ್ತರ** : ನಾಲ್ವಡಿ ಕೃಷ್ಣರಾಜರು 1895ರಲ್ಲಿ ಪಟ್ಟಾಭಿಷಿಕ್ತರಾದರು.

6. **ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

   **ಉತ್ತರ** : ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿ ನೀಡಿತು.

## II. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. **ನಾಲ್ವಡಿ ಕೃಷ್ಣ ರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

   **ಉತ್ತರ** : ಗ್ರಾಮ ನೈರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ.

2. **ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

**ಉತ್ತರ** : ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ, ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆ ಜನ್ಮ ಸಿದ್ಧ ಹಕ್ಕಾಗಬೇಕು.

3. **ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

**ಉತ್ತರ** : ದುರಾದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ಕಡಿಮೆ ಕೆಲಸ ಮಾಡುವವರು. ಆದರೆ ಈ ಮಾತಿಗೆ ನೀವು ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದಿರಿ. ನಾವು ನಿಮ್ಮಿಂದ ಕಲಿಯಬೇಕು ಎಂದಿದ್ದಾರೆ.

4. **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**

**ಉತ್ತರ** : ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1900ರಲ್ಲಿ ಶಿವನ ಸಮುದ್ರ ಬಳಿ ಕಾವೇರಿ ನದಿ ನೀರಿನಿಂದ ಪ್ರಾರಂಭಿಸಿದ ಶಿವನಸಮುದ್ರ ಜಲ ವಿದ್ಯುತ್ ಯೋಜನೆ, 1907 ವಾಣಿವಿಲಾಸ ಸಾಗರ ಆಣೆಕಟ್ಟು, 1911ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿಯಲ್ಲಿ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣ ಮುಂತಾದ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1 **“ಸಾಮಾಜಿಕ ಕಾನೂನುಗಳ ಹರಿಕಾರ”**

**ಆಯ್ಕೆ** : ಈ ವಾಕ್ಯವನ್ನು ‘ಭಾಗ್ಯಶಿಲ್ಪಿಗಳು’ ಗದ್ಯದಲ್ಲಿರುವ ಪಠ್ಯಪುಸ್ತಕ ಸಮಿತಿಯು ಸಂಗ್ರಹಿಸಿ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರು” ಪಾಠದಿಂದ ಆರಿಸಲಾಗಿದೆ.

**ಸಂದರ್ಭ** : ನಾಲ್ವಡಿ ಕೃಷ್ಣರಾಜ ಒಡೆಯರವರು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಕಾನೂನುಗಳನ್ನು ಜಾರಿಗೊಳಿಸಿದ್ದರಿಂದ ಈ ಹೆಸರು ಬಂದಿತ್ತು.

**ಸ್ವಾರಸ್ಯ** : ನಾಲ್ವಡಿ ಕೃಷ್ಣರಾಜ ಒಡೆಯರವರ ಸಾಧನೆಯನ್ನು ಹೇಳುವುದು ಇಲ್ಲಿನ ಸ್ವಾರಸ್ಯವಾಗಿದೆ.

2. **‘ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು.”**

**ಆಯ್ಕೆ** : ಈ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡರವರ ‘ಭಾಗ್ಯಶಿಲ್ಪಿಗಳು’ ಪಾಠದಿಂದ ಆರಿಸಲಾಗಿದೆ.

**ಸಂದರ್ಭ** : ವಿಶ್ವೇಶ್ವರಯ್ಯನವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ್ದ ಸ್ವಯಂ ಚಾಲಿತ ಬಾಗಿಲಗಳನ್ನು ಅಳವಡಿಸಿದರು ಎಂದು ಹೇಳುವಾಗ ಈ ವಾಕ್ಯವನ್ನು ಹೇಳಿದ್ದಾರೆ.

**ಸ್ವಾರಸ್ಯ** : ವೀಶ್ವೇಶ್ವರಯ್ಯನವರು ಹೆಚ್ಚು ಕೆಲಸ ಮಾಡುತಿದ್ದರು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

3. **''ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತೀ ಪ್ರಾಪ್ತವಾಯಿತು''**

**ಆಯ್ಕೆ** : ಈ ವಾಕ್ಯವನ್ನು 'ಭಾಗ್ಯಶಿಲ್ಪಿಗಳು' ಗದ್ಯದಲ್ಲಿರುವ ಪಠ್ಯಪುಸ್ತಕ ಸಮಿತಿಯು ಸಂಗ್ರಹಿಸಿ ನೀಡಿರುವ ನಾಲ್ವಡಿ ಕೃಷ್ಣ ರಾಜ ಒಡೆಯರು ಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಮೈಸೂರು ನೇರ ಉಸ್ತುವಾರಿಯನ್ನು ವಹಿಸಿಕೊಂಡು ನಂತರ ಮೈಸೂರ ರಾಜ್ಯದ ಸರ್ವೋತಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿ ದುಡಿದರು.ಇಡಿ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯ ಕಂಡಿತು. ಆದ್ದರಿಂದ 'ಮೈಸೂರು ರಾಜ್ಯಕ್ಕೆ ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ** : ಮೈಸೂರು ಸಂಸ್ಥಾನವು ಇಡೀ ಭರತ ಖಂಡಕ್ಕೆ ಮಾದರಿ ಸಂಸ್ಥಾನವಾಗಿ ಕೀರ್ತಿಯನ್ನು ಪಡೆಯಿತು ಎನ್ನುವುದರ ಹಿಂದೆ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತವನ್ನು ಎತ್ತಿ ತೋರಿಸುವುದು ಇಲ್ಲಿನ ಸ್ವಾರಸ್ಯವಾಗಿದೆ.

* * *

# ಗದ್ಯ ಭಾಗ–06 : ಯುದ್ಧ

**ಕವಿ ಪರಿಚಯ**

ಸಾರಾ ಅಬೂಬಕ್ಕರ್ ಅವರು 30 ಜೂನ್ 1936ರಂದು ಕಾಸರಗೋಡಿನಲ್ಲಿ ಜನಿಸಿದರು. ಕಾದಂಬರಿಗಳು– ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ. ಕಥಾ ಸಂಕಲನಗಳು–ಚಪ್ಪಲಿಗಳು, ಖೆಡ್ಡಾ, ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು,ಪಯಣ, ಪ್ರಶಸ್ತಿ–ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

**1. ರಾಹಿಲನು ಯಾರು?**

**ಉತ್ತರ** : ರಾಹಿಲನು ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಓರ್ವ ಡಾಕ್ಟರ್.

**2. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡೆದ್ದೇನು?**

**ಉತ್ತರ** : ರಾಹಿಲನು ತನ್ನ ಕೈಯಲ್ಲಿದ್ದ ಔಷಧ ಮತ್ತು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**3. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**

**ಉತ್ತರ** : ಗಡಿ ಪ್ರದೇಶದಲ್ಲಿವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತಿದೆ.

**4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?**

**ಉತ್ತರ** : ರಾಹಿಲನು "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ, ಸಂಕಷ್ಟಕೀಡಾದ ಮನುಷ್ಯರ ಕಡೆಯವನು" ಎಂದು ನುಡಿದನು.

## II. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

**1. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?**

**ಉತ್ತರ** : "ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳಿಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ? ವಿಮಾನದ ಪೈಲಟ್ ನುಡಿದನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

**ಉತ್ತರ** : ಮಹಿಳೆಯೊಬ್ಬಳ ಆರ್ತನಾದ ಕೇಳಿದ ರಾಹಿಲನು ಮನದಲ್ಲಿ ಮೂಡಿದ ಪ್ರಶ್ನೆಗಳೆಂದರೆ.ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ

ಹೊರಗಡೆಗೆ ಹಾಯುತ್ತಿರಲಿಲ್ಲ. ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?

3. **ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

**ಉತ್ತರ** : ಮುದುಕಿಯು "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟು ಇತ್ತು. ಈಗಲೂ ಇದೆಯನ್ನು, ಆದರೆ ನೆಮ್ಮದಿಯಿಂದ ಬದಕಲು ಈ ಜನ ಬಿಡಬೇಕಲ್ಲ?ಯುದ್ಧವಂತೆ, ಯುದ್ಧ!" ತಿರಸ್ಕಾರದಿಂದ ನುಡಿದಳು ಮುದುಕಿ.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1. **"ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"**

**ಆಯ್ಕೆ** : ಈ ಮೇಲಿನ ವಾಕ್ಯವನ್ನು ಸಾ.ರಾ. ಅಬೂಬಕ್ಕರವರು ಸಂಪಾದಿಸಿರುವ ಯುದ್ಧ ಪಾಠವನ್ನು 'ಚಪ್ಪಲಿಗಳು' ಎಂಬ ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ರಾಹಿಲನು ವೈರಿಗಳ ದಾಳಿಯಿಂದ ಗಾಯಗೊಂಡು ತೆವಳುತ್ತಲೇ, ಮುದಕಿಯ ಮನೆಗೆ ಬಂದು ಬಾಗಿಲು ಬಡೆಯುತ್ತಾ, ಈ ಮೇಲಿನ ವಾಕ್ಯದಂತೆ ಹೇಳುವ ಸಂದರ್ಭದಲ್ಲಿ ಬಂದಿದೆ.

**ಸ್ವಾರಸ್ಯ** : ಗಾಯಗೊಂಡಿರುವ ರಾಹಿಲ ಬಂದಾಗ ಯಾರಪ್ಪಾ ಅದೂ? ಈ ಮಳೆಯಲ್ಲಿ, ಈ ಕತ್ತಲ ಗುಹೆಯಲ್ಲಿ,ಯಾರೂ?" ಎಂದು ಕೇಳುವ ಮುದುಕಿಯ ಆತಂಕ ಹಾಗೂ ರಾಹಿಲನು ಅಪಾಯದಿಂದ ಪಾರಾಗುವ ಸನ್ನಿವೇಶ ಇಲ್ಲಿ ವ್ಯಕ್ತಗೊಂಡಿದೆ.

2. **"ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"**

**ಆಯ್ಕೆ** : ಈ ಮೇಲಿನ ವಾಕ್ಯವನ್ನು ಸಾ.ರಾ. ಅಬೂಬಕ್ಕರವರು ಸಂಪಾದಿಸಿರುವ ಯುದ್ಧ ಪಾಠವನ್ನು 'ಚಪ್ಪಲಿಗಳು' ಎಂಬ ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಮುದುಕಿಯು ರಾಹಿಲನನ್ನು ಗಮನಿಸಿದಾಗ ಆತ ಕೈ ಸನ್ನೆ ಮಾಡುತ್ತಾನೆ. ದಯವಿಟ್ಟು ಬಾಗಿಲು ತೆರೆಯಬೇಡಿ ಎಂದಾಗ ಮುದಕಿಯು ನಮ್ಮ ದೇಶದವನಲ್ಲಾ, ಎಂಬ ಸಂದೇಹ ಮುದಕಿಯಲ್ಲಿ ಮೂಡಿದಾಗ ರಾಹಿಲನ ಕಣ್ಣುಗಳನ್ನು ಗಮನಿಸುತ್ತಾಳೆ. ಅಂತೆ ಈ ಮೇಲಿನ ಮಾತು ನಿಜವಾಗಿದೆ.

**ಸ್ವಾರಸ್ಯ** : ರಾಹಿಲನ ಆತಂಕ, ಹಾಗೂ ಮುದಕಿಯು ನಮ್ಮ ದೇಶದವನಲ್ಲಾ, ಎಂಬ ದುಗಡತೆಯನ್ನು ಲೇಖಕಿ ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾರೆ.

* * *

# ಗದ್ಯ ಭಾಗ–07 : ಅಗ್ನಿಭೂತಿ ವಾಯುಭೂತಿಯರ ಕತೆ

**ಕವಿ ಪರಿಚಯ**

ಶಿವಕೋಟ್ಯಾಚಾರ್ಯ ಕನ್ನಡದ ಪ್ರಥಮ ಗದ್ಯ ಕೃತಿಕಾರ ಇತನ ಕೃತಿ ವಡ್ಡಾರಾಧನೆ. ಇವರು ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಕೋಗಳಿ ನಾಡಿನಲ್ಲಿ 10 ಶತಮಾನದಲ್ಲಿ ಜನಿಸಿದರು ಕೃತಿ ವಡ್ಡಾರಾಧನೆ

ಆಯ್ಕೆ ಗ್ರಂಥ: ಈ ಪಾಠವನ್ನು ಶಿವಕೋಟ್ಯಾಚಾರ್ಯ ಅವರು ವಡ್ಡಾರಾಧನೆಯ ಕೃತಿಯ ಸುಕಮಾರಸ್ವಾಮಿ ಕೃತಿಯಿಂದ ಆರಿಸಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

**1. ಕೌಸಂಬಿಯ ಅರಸ ಯಾರು?**

**ಉತ್ತರ :** ಕೌಸಂಬಿ ಅರಸ ಅತಿ ಬಳ

**2. ಸೋಮ ಶರ್ಮಾ ಕಾಶ್ಯಪಿಯರ ಮಕ್ಕಳ ಹೆಸರೇನು?**

**ಉತ್ತರ :** ಅಗ್ನಿಭೂತಿ ಮತ್ತು ವಾಯುಭೂತಿ

**3. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**

**ಉತ್ತರ :** ಕಾಶ್ಯಪಿ ಅಣ್ಣಸೂರ್ಯಮಿತ್ರ

**4. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು?**

**ಉತ್ತರ :** ಇಬ್ಬರು ಸಪ್ತವ್ಯಸನಿಗಳಾಗಿ ಮಂತ್ರಿಪದವಿ ಕಳಿದುಕೊಂಡಿದ್ದರು ಅದೇ ರೀತಿ ನಿಮ್ಮ ತಾಯಿ ನನಗೆ ತಂಗಿ ಎಂದರೆ ವಿದ್ಯಾಭ್ಯಾಸ ಕಲಿಯುವುದಿಲ್ಲಾ ಎಂಬ ಕಾರಣಕ್ಕೆ.

**5. ಪಂಡಿತರಾದ ಅಗ್ನಿಭೂತಿ ವಾಯು ಭೂತಿಯರಿಗೆ ದೊರೆತ ಪದವಿ ಯಾವುದು?**

**ಉತ್ತರ :** ಮಂತ್ರಿ ಪದವಿ

## II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ

**1. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ?**

**ಉತ್ತರ :** ಅತಿ ಬಳನ ಆಸ್ಥಾನದಲ್ಲಿ ತಂದೆಯ ಮರಣಾನಂತರ ಮಂತ್ರಿಪದವಿ ಪಡೆದುಕೊಂಡಿದ್ದು ಆದರೆ ಇವರು ಸಪ್ತವ್ಯಸನಿಗಳಾದ ಕಾರಣ ಏನೂ ಓದುಬಾರದವರೆಂದು ಉಳಿದ ಆಸ್ಥಾನ ಮಂತ್ರಿಗಳಿಗೆ ಗೊತ್ತಾಗಿ ಕೊನೆಗೆ ರಾಜನಿಗೂ ವಿಷಯ ತಿಳಿದು ಆಸ್ಥಾನದಿಂದ ಇವರನ್ನು ಹೊರ ಹಾಕಿದನು.

2. **ಅಗ್ನಿಭೂತಿ ವಾಯುಭೂತಿಯರು ಸೂರ್ಯ ಮಿತ್ರನಿಂದ ಕಲಿತ ವಿದ್ಯೆಗಳಾವವು?**

**ಉತ್ತರ** : ಸೂರ್ಯಮಿತ್ರನಿಂದ ಆರು ವೇದಗಳು, ಆಗಮಗಳು, ಹದಿನೆಂಟು ಧರ್ಮಶಾಸ್ತ್ರಗಳು, ಮೀಮಾಂಸೆ, ನ್ಯಾಯಶಾಸ್ತ್ರ, ವ್ಯಾಕರಣ, ನಿಘಂಟು, ಛಂದಸ್ಸು, ಅಲಂಕಾರ, ನಾಟಕ, ಸಾಮುದ್ರಿಕ, ಶಾಲಿ ಹೋತ್ರ ಶಾಸ್ತ್ರ ಮೊದಲಾದವು.

3. **ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?**

**ಉತ್ತರ** : ವಾಯುಭೂತಿ ಯುಗರ್ವಿಷ್ಟ, ಕೃತಘ್ನನಾಗದೆ, "ನಾವು ಭಿಕ್ಷೆ ಬೇಡಿ ತಂದ ಅನ್ನಕ್ಕೆ ಒಂದು ಮಿಳ್ಳೆ ಎಣ್ಣೆಯಾಗಲಿ ಸ್ವಲ್ಪ ಉಪ್ಪನಾಗಲಿ ನೀಡಲಿಲ್ಲ. ಕಡೆಗೆ ಹುಳಿ ಮಜ್ಜಿಗೆಯನ್ನು ಕೊಡಲಿಲ್ಲ ಎಂದು ಪ್ರತಿಕ್ರಿಯಿಸಿದನು.

## III. ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ

1. **"ಕಣ್ಣನೀರಂತೀವಿನೆಲನಂಬರೆಯುತ್ತಿರೆ"**

**ಆಯ್ಕೆ** : ಶಿವಕೋಟ್ಯಾಚಾರ್ಯ ಬರೆದಿರುವ ಅಗ್ನಿಭೂತಿ ವಾಯುಭೂತಿಯರ ಕತೆಪಾಠವನ್ನು ವಡ್ಡಾರಾಧನೆ ಕೃತಿಯ ಸುಕುಮಾರಸ್ವಾಮಿ ಕೃತಿಯಿಂದ ಆರಿಸಲಾಗಿದೆ.

**ಸಂದರ್ಭ** : ಸೋಮಶರ್ಮನ ಅಕಾಲಿಕ ಮರಣದ ನಂತರ ಕೌಶಂಬಿ ರಾಜನ ಮಂತ್ರಿಯಲ್ಲಿ ಮಂತ್ರಿಪದವಿ ಪಡೆದುಕೊಂಡು ಸಕಲ ಸನ್ಮಾನತರಾಗಿ ಜೀವನ ಮಾಡಿತ್ತಿರುತ್ತಾರೆ ಆದರೆ ಒಮ್ಮೆ ಆಸ್ಥಾನದಲ್ಲಿ ಪ್ರಶ್ನೆ ಹಾಕಿದಾಗ ಇವರು ಏನು ಓದುಬಾರದವರಾಗಿ ನೆಲವನ್ನು ತಮ್ಮ ಅಂಗಾಲಿನಿಂದ ತೀಡುತ್ತಿದ್ದಾಗ ಈ ಮೇಲಿನ ಸಂದರ್ಭದಲ್ಲಿ ಬಂದಿರುತ್ತದೆ.

**ಸ್ವಾರಸ್ಯ** : ಇಲ್ಲಿ ಜ್ಞಾನ ಮುಖ್ಯವಾಗಿದ್ದು ಅದು ಅಗ್ನಿಭೂತಿ ವಾಯುಭೂತಿಯಲ್ಲಿರದೆ ಇದ್ದಾಗ ಯಾವ ರೀತಿ ಆಗುತ್ತದೆ ಎಂಬುದು ಸ್ವಾರಸ್ಯ ರೂಪದಲ್ಲಿ ವ್ಯಕ್ತವಾಗಿದೆ.

2. **"ಪಸರಂಗೊಟ್ಟೆನಿಲ್ಲಿದರ್ಕೆಮುಳಿಯದಿರಿಂ"**

**ಆಯ್ಕೆ** : ಶಿವಕೋಟ್ಯಾಚಾರ್ಯ ಬರೆದಿರುವ ಅಗ್ನಿಭೂತಿ ವಾಯುಭೂತಿಯರ ಕತೆ ಪಾಠವನ್ನು ವಡ್ಡಾರಾಧನೆ ಕೃತಿಯ ಸುಕುಮಾರ ಸ್ವಾಮಿ ಕೃತಿಯಿಂದ ಆರಿಸಲಾಗಿದೆ.

**ಸಂದರ್ಭ** : ಸೋರ್ಯಮಿತ್ರ ಸೋದರಳಿಯರಾದ ಅಗ್ನಿಭೂತಿ ವಾಯುಭೂತಿಯನ್ನು ಬುದ್ಧಿವಂತರನ್ನಾಗಿ ಮಾಡುವ ಮುಂಚೆ ಇವರು ಸಪ್ತವ್ಯಸನಿಗಳಾಗುದ್ದರು ಇದರಿಂದ ದುರಪಯೋಗಪಡಿಸಿಕೊಳ್ಳ-ಬಾರದೆಂದು ನೀವು ಯಾರು ಎಂದು ನನಗೆ ತಿಳಿಯದೆ ಆದರ ವಿದ್ಯಾಭ್ಯಾಸಕ್ಕೆ ಬಂದಿರಲ್ಲಾ ನಿಮಗೆ ವಿದ್ಯೆ ಹೇಳಿಕೊಟ್ಟು ಜ್ಞಾನವಂತರನ್ನಾಗಿ ಮಾಡಿದಾಗ ಈ ಮೇಲಿನ ಸಂದರ್ಭದಲ್ಲಿ ಬಂದಿರುತ್ತದೆ.

**ಸ್ವಾರಸ್ಯ** : ಇಲ್ಲಿ ಜ್ಞಾನಮುಖ್ಯವಾಗಿದ್ದು ಸಂಬಂಧಗಳು ಬಂದಾಗ ಅದು ಸಿಗುವುದಿಲ್ಲಾ ಅದು ಅಗ್ನಿಭೂತಿ ವಾಯುಭೂತಿಯಲ್ಲಿರದೆ ಇದ್ದಾಗ ಯಾವ ರೀತಿ ಆಗುತ್ತದೆ ಎಂಬುದು ಸ್ವಾರಸ್ಯ ರೂಪದಲ್ಲಿ ವ್ಯಕ್ತವಾಗಿದೆ.

# ಪದ್ಯ ಭಾಗ–01 : ಸಂಕಲ್ಪ ಗೀತೆ

**ಕವಿ ಪರಿಚಯ:–**

**ಡಾ. ಜಿ. ಎಸ್. ಶಿವರುದ್ರಪ್ಪ**

ಜಿ. ಎಸ್. ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪನವರು ಕ್ರಿ.ಶ.1926ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಅನಾವರಣ. ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕಾವ್ಯಾರ್ಥಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ರಾಷ್ಟ್ರಕವಿ  ಅಭಿಧಾನ ಮತ್ತು ಪಂಪಪ್ರಶಸ್ತಿಗೆ ಪಾತ್ರರಾಗಿದ್ದಾರೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

1. **ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?**

**ಉತ್ತರ :** ಬಿರುಗಾಳಿಗೆ ಹೊಯ್ದಾಡುವ ಹಡಗನು ಎಚ್ಚರದಲಿ ಮುನ್ನಡೆಸಬೇಕು.

2. **ನದೀಜಲಗಳು ಏನಾಗಿವೆ ?**

**ಉತ್ತರ :** ನದೀಜಲಗಳು ಕಲುಷಿತವಾಗಿದೆ.

3. **ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?**

**ಉತ್ತರ :** ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

4. **ಕಾಡುಮೇಡುಗಳ ಸ್ಥಿತಿ ಹೇಗಿದೆ ?**

**ಉತ್ತರ :** ಕಾಡುಮೇಡುಗಳ ಸ್ಥಿತಿ ಬರಡಾಗಿದೆ.

5. **ಯಾವ ಎಚ್ಚರದೊಳು ಬದುಕಬೇಕಿದೆ ?**

**ಉತ್ತರ :** ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದೊಳು ಬದುಕಬೇಕಿದೆ.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ  ಉತ್ತರಿಸಿ

1. **ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ ?**

**ಉತ್ತರ :** ನಮ್ಮ ಜೀವನವೆಂಬ ಹಡಗಿನ ಸುತ್ತಮುತ್ತಲು ಕವಿದಿರುವ ಅಜ್ಞಾನಯೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿ ಎಂಬ ಅರಿವಿನ (ತಿಳುವಳಿಕೆಯ) ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಜ್ಞಾನ ಎಂಬ ಹಣತೆಯ ಮೂಲಕ ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸಬೇಕಿದೆ.

2. **ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

**ಉತ್ತರ:** ಮುಂಗಾರಿನ ಮಳೆಯಾದಾಗ ಪ್ರಕೃತಿ ಹಚ್ಚಹಸಿರಿನಿಂದ ಕಂಗೊಳಿಸುತ್ತದೆ. ವಸಂತನ ಕಾಲದ ಆಗಮನ ಬರಡಾಗಿರುವ ಕಾಡುಮೇಡುಗಳಲ್ಲಿ ಮರಗಿಡಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವಚೈತನ್ಯದ ರೀತಿಯಲ್ಲಿ ಮುಟ್ಟಬೇಕಾಗಿದೆ.

3. **ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**

**ಉತ್ತರ:** ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತ ಧರ್ಮಗಳ ಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗಬೇಕಿದೆ.

4. **ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

**ಉತ್ತರ:** ನಾಳಿನ ಕನಸನ್ನು ಬಿತ್ತಬೇಕಾದರೆ ಮತ ಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾನಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮುಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ, ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ

1. **"ಪ್ರೀತಿಯ ಹಣತೆಯ ಹಚ್ಚೋಣ."**

**ಆಯ್ಕೆ :** ಈ ವಾಕ್ಯವನ್ನು ಕವಿ 'ಜಿ.ಎಸ್. ಶಿವರುದ್ರಪ್ಪ' ಅವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದು 'ಸಂಕಲ್ಪಗೀತೆ ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ನಮ್ಮ ಜೀವನದಲ್ಲಿ ಎಂತಹ ಹಣತೆಯನ್ನು ಎಂಬ ಭಾವ ಮಾಡಿದಾಗ ಕವಿ ಜಿ.ಎಸ್.ಶಿವರುದ್ರಪ್ಪನವರು ಜಾತೀಯತೆ, ಮತ, ಭಾಷೆ, ಬಣ್ಣ, ಅಜ್ಞಾನ, ಅಂದಕಾರ, ಮೂಢ ನಂಬಿಕೆಗಳೆಂಬ ಕತ್ತಲೆಯನ್ನು ಓಡಿಸಲು ಪ್ರೀತಿಯೆಂಬ ಅರಿವಿನ ಹಣತೆಯನ್ನು ಹಚ್ಚಬೇಕಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ನಮ್ಮ ಜೀವನದಲ್ಲಿ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಲು ಪ್ರೀತಿಯೆಂಬ ಅರಿವಿನ ದೀಪವನ್ನು ಬೆಳಗಿಸುವ ಸಂಕಲ್ಪ ಮಾಡಬೇಕೆಂಬ ತಮ್ಮ ಭಾವನೆಯನ್ನು ಕವಿ ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾರೆ.

2. **“ಮುಂಗಾರಿನ ಮಳೆಯಾಗೋಣ.”**

**ಆಯ್ಕೆ** : ಈ ವಾಕ್ಯವನ್ನು ಕವಿ ‘ಜಿ.ಎಸ್. ಶಿವರುದ್ರಪ್ಪ’ ಅವರು ರಚಿಸಿರುವ ‘ಎದೆ ತುಂಬಿ ಹಾಡಿದೆನು’ ಕವನ ಸಂಕಲನದಿಂದ ಆಯ್ದು ‘ಸಂಕಲ್ಪಗೀತೆ’ ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಮಾನವರ ದುರ್ವರ್ತನೆಯಿಂದ ಕಲುಷಿತವಾಗಿರುವ ನದೀಜಲಗಳ ಶುದ್ಧೀಕರಣ ಹೇಗಾಗಬೇಕೆಂಬ ಭಾವಕವಿಯ ಮನದಲ್ಲಿ ಮೂಡಿದಾಗ ಮುಂಗಾರಿನ ಮಳೆಯಾಗಿ ಕಲ್ಮಶಗಳನ್ನು ಕೊಚ್ಚಿಕೊಂಡು ಹೋಗಬೇಕು, ಬರಡಾಗಿರುವ ಕಾಡು–ಮೇಡುಗಳಿಗೆ ಸಂತವಾಗಬೇಕೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿಕೊಂಡು ಹೋದಂತೆ ಹೊಸ ಸಂಕಲ್ಪ ಜನರ ಮನದ ಕಲ್ಮಶಗಳನ್ನು ಕಳೆದು ಬದುಕನ್ನು ಸಮೃದ್ಧವಾಗಿಸಬೇಕು ಎಂದು ಕವಿ ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

3. **“ಹೊಸ ಭರವಸೆಗಳ ಕಟ್ಟೋಣ.”**

**ಆಯ್ಕೆ** : ಈ ವಾಕ್ಯವನ್ನು ಕವಿ ‘ಜಿ.ಎಸ್. ಶಿವರುದ್ರಪ್ಪ’ ಅವರು ರಚಿಸಿರುವ ‘ಎದೆ ತುಂಬಿ ಹಾಡಿದೆನು’ ಕವನ ಸಂಕಲನದಿಂದ ಆಯ್ದು ‘ಸಂಕಲ್ಪಗೀತೆ’ ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಕುಸಿದು ಹೋಗಿರುವ ಮೌಲ್ಯಗಳನ್ನು ಮತ್ತೆ ಎಬ್ಬಿಸಿ ನಿಲ್ಲಿಸಬೇಕು. ಬಡತನ, ಅಜ್ಞಾನದ ಮೂಢನಂಬಿಕೆ, ಧರ್ಮ, ಭಾಷೆ, ಜಾತಿಗಳಿಂದ ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕಲು ಹೊಸ ಭರವಸೆಗಳನ್ನು ಕಟ್ಟಿ ಕೊಡಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಮೌಲ್ಯಗಳನ್ನು ಪುನಸ್ಥಾಪಿಸುವ, ಹಾಗೂ ಶೋಷಿತರ ಬದುಕಿಗೆ ಭರವಸೆ ತುಂಬುವ ಸಂಕಲ್ಪಬೇಕು ಎಂಬುದನ್ನು ಕವಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾರೆ.

4. **“ಹೊಸ ಎಚ್ಚರದೊಳು ಬದುಕೋಣ.”**

**ಆಯ್ಕೆ** : ಈ ವಾಕ್ಯವನ್ನು ಕವಿ ‘ಜಿ.ಎಸ್. ಶಿವರುದ್ರಪ್ಪ’ ಅವರು ರಚಿಸಿರುವ ‘ಎದೆ ತುಂಬಿ ಹಾಡಿದೆನು’ ಕವನ ಸಂಕಲನದಿಂದ ಆಯ್ದು ಸಂಕಲ್ಪಗೀತೆ ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಬೇರೆ ಬೇರೆ ಮತಗಳ ನಡುವಿನ ಸಂಘರ್ಷಗಳ ಪರಿಣಾಮದ ಬಗ್ಗೆ ಕವಿಯ ಮನೋಭಾವದಲ್ಲಿ ಮೂಡಿದಾಗ ಅದಕ್ಕೆ ಪರಿಹಾರೋತ್ತರವಾಗಿ ಮತಗಳೆಲ್ಲವೂ ಸಾಧನೆಯ ದಾರಿಗಳು, ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾನಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ** : ಸಮಾಜದಲ್ಲಿ ಶಾಂತಿ ಮತ್ತು ಐಕ್ಯತೆ ನೆಲೆಸಲು ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕಬೇಕೆಂಬ ಮೌಲ್ಯವನ್ನು ಕವಿ ಈ ವಾಕ್ಯದಲ್ಲಿ ಎತ್ತಿಹಿಡಿದಿದ್ದಾರೆ.

**ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ**

ಕಲುಷಿತವಾದೀ ನದೀ ಜಲಗಳಿಗೆ

ಮುಂಗಾರಿನ ಮಳೆಯಾಗೋಣ

ಬರಡಾಗಿರವೀ ಕಾಡು ಮೇಡುಗಳ

ವಸಂತವಾಗುತ ಮುಟ್ಟೋಣ

ಮತಗಳೆಲ್ಲವೂ ಪಥಗಳು ಎನ್ನುವ

ಹೊಸ ಎಚ್ಚರದೊಳು ಬದುಕೋಣ

ಭಯ ಸಂಶಯದೊಳು ಕಂದಿದ ಕಣ್ಣೊಳು

ನಾಳಿನ ಕನಸನು ಬಿತ್ತೋಣ.

* * *

# ಪದ್ಯ ಭಾಗ–02 : ಹಕ್ಕಿ ಹಾರುತಿದೆ ನೋಡಿದಿರಾ

**ಕವಿ ಪರಿಚಯ:–**

**ದ. ರಾ. ಬೇಂದ್ರೆ**

ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ1896ರಲ್ಲಿ ಧಾರವಾಡದಲ್ಲಿ ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ದ.ರಾ. ಬೇಂದ್ರೆ ಅವರು ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದ ಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್‌ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ ಇವರ ಅರಳು–ಮರಳು ಕವನ ಸಂಕಲನಕ್ಕೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ನಾಕುತಂತಿ ಕವನ ಸಂಕಲನಕ್ಕೆ 'ಜ್ಞಾನಪೀಠ ಪ್ರಶಸ್ತಿ' ಲಭಿಸಿದೆ

**I. ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?**

**ಉತ್ತರ :** ಹಕ್ಕಿ ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ಗಾವುದ ಗಾವುದ ರೀತಿಯಲ್ಲಿ ವೇಗವಾಗಿ ಹಾರುತ್ತಿದೆ.

**2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?**

**ಉತ್ತರ :** ಹಕ್ಕಿಯ ಗರಿಯಲ್ಲಿ ಬಿಳಿ ಹೊಳೆ ಬಣ್ಣಗಳಿವೆ.

**3. ಹಕ್ಕಿಯ ಕಣ್ಣುಗಳು ಯಾವುವು ?**

**ಉತ್ತರ :** ಹಕ್ಕಿಯ ಕಣ್ಣುಗಳು ಸೂರ್ಯಚಂದ್ರರು.

**4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?**

**ಉತ್ತರ :** ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

**5. ಹಕ್ಕಿ ಯಾರನ್ನು ಹರಸಿದೆ ?**

**ಉತ್ತರ :** ಹಕ್ಕಿ ಹೊಸಗಾಲದ ಹಸು ಮಕ್ಕಳನ್ನು ಹರಸಿದೆ.

**6. ಹಕ್ಕಿಯು ಯಾವುದರ ಸಂಕೇತವಾಗಿದೆ ?**

**ಉತ್ತರ :** ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.

**7. ಹಕ್ಕಿಯ ಚುಂಚಗಳು ಎಲ್ಲಿಯವರೆಗೊಚಿವೆ ?**

**ಉತ್ತರ :** ಹಕ್ಕಿಯ ಚುಂಚಗಳು ದಿಗ್ಮಂಡಲ ಅಂಚಿನ ಆಚೆಯವರೆಗೂ ಚಾಚಿವೆ.

**8. ಹಕ್ಕಿಯು ಯಾವ ಮಾಲೆಯನ್ನು ಸಿಕ್ಕಿಸಿಕೊಂಡಿದೆ ?**

**ಉತ್ತರ :** ಹಕ್ಕಿಯು ಚಿಕ್ಕೆಯ ಮಾಲೆಯನ್ನು ಸಿಕ್ಕಿಸಿಕೊಂಡಿದೆ.

**9. ಹಕ್ಕಿಯು ಯಾವ ಲೋಕದ ಅಂಗಳಕ್ಕೇರಿದೆ ?**

**ಉತ್ತರ :** ಹಕ್ಕಿಯು ಮಂಗಳ ಲೋಕದ ಅಂಗಳಕ್ಕೇರಿದೆ.

**10. ಹಕ್ಕಿಯು ಏನನ್ನು ಒಡೆಯಲು ಹೊಂಚು ಹಾಕಿದೆ ?**

**ಉತ್ತರ :** ಹಕ್ಕಿಯು ಬ್ರಹ್ಮಾಂಡಗಳನ್ನು ಒಡೆಯಲು ಹೊಂಚುಹಾಕಿದೆ.

**11. ಹಕ್ಕಿಯು ಯಾವ ಮೇರೆಯನ್ನು ಮೀರಿದೆ ?**

**ಉತ್ತರ :** ಹಕ್ಕಿಯು ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿದೆ.

**12. ಹಕ್ಕಿ ಹಾರುತಿದೆ ನೋಡಿದಿರಾ ! ಕವಿತೆಯನ್ನು ಯಾವ ಕೃತಿಯಿಂದ ಆಯ್ಕೆ ಮಾಡಲಾಗಿದೆ ?**

**ಉತ್ತರ :** ಹಕ್ಕಿ ಹಾರುತಿದೆ ನೋಡಿದಿರಾ ! ಕವಿತೆಯನ್ನು ಗರಿ ಕೃತಿಯಿಂದ ಆಯ್ಕೆ ಮಾಡಲಾಗಿದೆ.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?**

**ಉತ್ತರ :** ಕಾಲವೆಂಬ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳೊಡೆದವು ಎಂಬಂತೆ, ಆಕಾಶದಲ್ಲಿ ಮಿನುಗುತ್ತಿರುವ ಚಿಕ್ಕೆಗಳ (ನಕ್ಷತ್ರ) ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗುತ್ತಿದೆ ಎಂದು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

**2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

**ಉತ್ತರ :** ಕಾಲವು ಯುಗಯುಗಗಳ ಹಣೆ ಬರಹವನ್ನು, ಅಳಿಸಿ ಹಾಕಿ ಹೊಸತನವನ್ನು (ಒಳ್ಳೆತನವನ್ನು) ಹೊಸ ಹಣೆಬರಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದುಕೊಟ್ಟಿದೆ. ಹಾಗೆಯೇ ರೆಕ್ಕೆಯ ಬೀಸುತ, ಮೇಲಕ್ಕೆ ಹಾರುತ, ಹಾರುವ ಈ ಹೊಸಗಾಲದ ಹಸುಮಕ್ಕಳಿಗೆ ಹೊಸಚೇತನವನ್ನು (ಶಕ್ತಿಯನ್ನು) ನೀಡುತ್ತ, ಉತ್ತಮ ಭವಿಷ್ಯಕ್ಕಾಗಿ ಶುಭ ಹರಸಿದೆ.

3. **ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ?**

**ಉತ್ತರ :** ಕಾಲದಹಕ್ಕಿಯು, ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ ಹಾರಿ ಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಹಕ್ಕಿ ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಸಂತೋಷವಾಗಿ ಆಡುತ್ತಿದೆ.

4. **ಕಾಲದ ಹಕ್ಕಿಯ ರೆಕ್ಕೆಪುಚ್ಚಗರಿಗಳನ್ನು ಯಾವ ಯಾವ ಬಣ್ಣಗಳಿಗೆ ಹೋಲಿಸಿದ್ದಾರೆ ?**

**ಉತ್ತರ :** ಕಾಲದ ಹಕ್ಕಿಗೆ ಪಕ್ಕೆಯಲ್ಲಿ ಇರುವ ರೆಕ್ಕೆಗಳನ್ನು ಕೆಂಪಾದ, ಹೊಳೆಯುವ ಹೊನ್ನಿನ ಬಣ್ಣಬಣ್ಣಗಳಿಗೆ ಹೋಲಿಸಿದ್ದಾರೆ. ಪುಚ್ಚಗಳನ್ನು ಕಪ್ಪು ಮತ್ತು ಬಿಳಿ ಬಣ್ಣಕ್ಕೆ ಹೋಲಿಸಿದ್ದಾರೆ. ಹಾಗೆಯೇ ಹಕ್ಕಿಯ ಗರಿಗಳನ್ನು ಬಿಳಿ–ಹೊಳೆಬಣ್ಣಕ್ಕೆ ಹೋಲಿಸಿದ್ದಾರೆ.

5. **ಕಾಲ ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ ಮತ್ತು ಏಕೆ ?**

**ಉತ್ತರ :** ಕಾಲವೆಂಬ ಹಕ್ಕಿ ದಿಶಾವಲಯದ (ದಶದಿಕ್ಕುಗಳ ತುದಿ) ತುತ್ತ ತುದಿಗೆ ಮುಟ್ಟಿದೆ. ದಿಶಾವಲಯದ ಆಚೆಗೆ ತನ್ನಯ ಚುಂಚವನ್ನು ಚಾಚಿದೆ. ಜಗತ್ತಿನ ಮೂಲವನ್ನು ಒಡೆಯಲು, ಪ್ರಪಂಚದ ವಿಸ್ಮಯವನ್ನು ಭೇಧಿಸಲು ಎಂಬಂತೆ ಹೊಂಚುಹಾಕಿದೆ.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. **"ರೆಕ್ಕೆಗಳೆರಡೂ ಪಕ್ಕದಲ್ಲುಂಟು"**

**ಆಯ್ಕೆ :** ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಬೇಂದ್ರೆಯವರು ಕಾಲದ ಗುರು ತನ್ನ ಹಕ್ಕಿಯ ರೆಕ್ಕೆಗಳ ಬಣ್ಣದ ರೂಪಗಳಿಗೆ ಹೋಲಿಸುವ ಸಂದರ್ಭದಲ್ಲಿ ಈ ಮಾತನ್ನು ತಿಳಿಸಿದ್ದಾರೆ. ಹಕ್ಕಿಗೆ ಕರಿ ನರೆ ಬಣ್ಣದ ಪುಚ್ಚಗಳುಂಟು. ಬಿಳಿ ಹೊಳೆ ಬಣ್ಣದ ಗರಿಗಳಿವೆ ಹಾಗೆಯೇ ಕೆನ್ನನ ಹೊನ್ನನ ಬಣ್ಣ–ಬಣ್ಣಗಳ "ರೆಕ್ಕೆಗಳೆರಡೂ ಪಕ್ಕದಲುಂಟು" ಅಂದರೆ ಕೆಂಪಾದ ಮತ್ತು ಹೊನ್ನಿನ ಬಣ್ಣಗಳ ಹಕ್ಕಿಯ ರೆಕ್ಕೆಗಳು ಪಕ್ಕಿಯಲ್ಲಿವೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ :** ಕಾಲವೆಂಬ ಹಕ್ಕಿಯ ರೆಕ್ಕೆಗಳಿಗಿರುವ ಬಣ್ಣಗಳ ಭೌತಿಕ ರೂಪವನ್ನು ಕಾಲದ ಗುರುತಾಗಿ ಅಭಿವ್ಯಕ್ತಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

2. **"ಸಾರ್ವಭೌಮರಾ ನೆತ್ತಿಯ ಕುಕ್ಕಿ"**

**ಆಯ್ಕೆ :** ಈ ವಾಕ್ಯವನ್ನು ದ.ರಾ. ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಕವಿ ದ.ರಾ.ಬೇಂದ್ರೆ ಅವರು ಕಾಲದ ಸಾರ್ವಭೌಮತ್ವವನ್ನು ವಿವರಿಸಿ ವರ್ಣಿಸುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳುತ್ತಾರೆ. ಕಾಲ ಪಕ್ಷಿಯು ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿ, ಕಾಲಗತಿಯಲ್ಲಿ ರಾಜಮಹಾರಾಜರ ಕೋಟೆ–ಕೊತ್ತಲಗಳನ್ನು ನಾಶಮಾಡುತ್ತಾ, ಖಂಡ–ಖಂಡಗಳನ್ನು ತೇಲಿಸಿ–ಮುಳುಗಿಸಿ, ಸಾರ್ವಭೌಮರೆಂದು ಮೆರೆದವರ ನೆತ್ತಿಯ ಮೇಲೆ ಕುಕ್ಕಿ ಕೆಳಗೆ ಬೀಳಿಸಿ ಹೊಸಕಿ ಹಾಕಿ ಹಕ್ಕಿ ಹಾರಿ ಹೋಗಿದೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ :** ಕಾಲದ ಗತಿಯಲ್ಲಿ ವೈಭವದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮ ವಿಶೇಷವಾಗಿದ್ದಾರೆ ಎಂಬುದು ಸ್ವಾರಸ್ಯಪೂರ್ಣವಾಗಿ ಈ ವಾಕ್ಯದಲ್ಲಿ ವರ್ಣಿತವಾಗಿದೆ.

3. **"ಬಲ್ಲರು ಯಾರಾ ಹಾಕಿದ ಹೊಂಚ"**

**ಆಯ್ಕೆ :** ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಬೇಂದ್ರೆಯವರ ಕಾಲವೆಂಬ ಹಕ್ಕಿಯು ತನ್ನ ಬಾಹುವಿನಿಂದ ಜಗತ್ತಿನ ರಹಸ್ಯವನ್ನು ಭೇದಿಸುವ ತಂತ್ರವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳುತ್ತಾರೆ. ಕಾಲವೆಂಬ ಹಕ್ಕಿ ದಿಶಾವಲಯದ ತುತ್ತತುದಿಗೆ ಮುಟ್ಟಿ, ಆಚೆಗೆ ತನ್ನಯ ಕೊಕ್ಕನ್ನು ಚಾಚಿದೆ. ಅದು ಬ್ರಹ್ಮಾಂಡಲಗಳನ್ನು ಒಡೆಯಲೋ ಎಂಬಂತೆ ಹೊಂಚು ಹಾಕಿದೆ ಏನೋಬಲ್ಲವರಾರು? ಸಂದರ್ಭದಲ್ಲಿ ಎಂಬ ವಿಸ್ಮಯವನ್ನು ಅಭಿವ್ಯಕ್ತಪಡಿಸುವ ಈ ವಾಕ್ಯ ಬಂದಿದೆ.

**ಸ್ವಾರಸ್ಯ :** ಕಾಲ ಪಕ್ಷಿಯು ಬ್ರಹ್ಮಾಂಡ ರಹಸ್ಯವನ್ನು ಭೇದಿಸಲು ಹೊಂಚು ಹಾಕಿರಬಹುದು! ಎಂಬ ವಿಸ್ಮಯವನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

4. **"ಹೊಸಗಾಲದ ಹಸು ಮಕ್ಕಳ ಹರಸಿ"**

**ಆಯ್ಕೆ :** ಈ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಬೇಂದ್ರೆಯವರು ಯುವ ಜನಾಂಗದ ಉತ್ತಮ ಭವಿಷ್ಯಕ್ಕಾಗಿ ಕಾಲದ ಶುಭ ಹಾರೈಕೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳುತ್ತಾರೆ. ಕಾಲವು ಯುಗ ಯುಗಗಳ ಹಣೆ ಬರೆವನ್ನು, ಅಳಿಸಿ ಹಾಕಿ ಹೊಸತನದ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬಿಚ್ಚಿ ಮೇಲೇರುತ್ತಾ ಹೊಸಗಾಲದ ಹಸುಮಕ್ಕಳಿಗೆ ಹೊಸಚೇತನವನ್ನು ನೀಡುತ್ತಾ, ಉತ್ತಮ ಭವಿಷ್ಯಕ್ಕಾಗಿ ಶುಭಹರಸಿದೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ :** ಯುವಜನಾಂಗದ ಭವಿಷ್ಯಕ್ಕೆ ಶುಭವಾಗಲಿ ಎಂದು ಹರಸುವ ಕಾಲಪಕ್ಷಿಯ ಗುಣ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

5. **"ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ :** ಈ ವಾಕ್ಯವನ್ನು ದ.ರಾ. ಬೇಂದ್ರೆ ವಿರಚಿತ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಕಾಲದ ವೈಜ್ಞಾನಿಕ ಗತಿಯನ್ನು ಹೇಳುವ ಸಂದರ್ಭದಲ್ಲಿ ದ.ರಾ.ಬೇಂದ್ರೆ ಅವರು ಈ ವಾಕ್ಯವನ್ನು ಹೇಳುತ್ತಾರೆ. ಕಾಲಪಕ್ಷಿಯು ಬೆಳ್ಳಿಚುಕ್ಕಿ (ಶುಕ್ರಗ್ರಹ) ಎಂಬ ಹಳ್ಳಿಯ ಮೇರೆಯನ್ನು ದಾಟಿ, ಚಂದ್ರಲೋಕಕ್ಕೆ ಹಾರಿ ನೀರಿನ್ನು ಹೀರಿ ಹಾಗೆಯೇ ಮುಂದೆ ಹಾರಾಡುತ್ತ ಹಾರಾಡುತ್ತ ಮಂಗಳಲೋಕ (ಗ್ರಹ)ದ ಅಂಗಳಕ್ಕೆ ಏರಿಹೋಗುತ್ತಿದೆ ಎಂದು ವಿವರಿಸುವ ಸಂದರ್ಭದಲ್ಲಿ ಈ ವಾಕ್ಯಬಂದಿದೆ.

**ಸ್ವಾರಸ್ಯ :** ವೈಜ್ಞಾನಿಕವಾಗಿ ಭಾರತೀಯರು ಶುಕ್ರ, ಚಂದ್ರ, ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ**

ನೀಲ ಮೇಘ ಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಯುಗ-ಯುಗಗಳ ಹಣೆಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

* * *

# ಪದ್ಯ ಭಾಗ–03 : ಹಲಗಲಿ ಬೇಡರು

**I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?**

**ಉತ್ತರ :** ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು.

**2. ಹಲಗಲಿಯ ನಾಲ್ವರು ಪ್ರಮುಖರು ಯಾರು ?**

**ಉತ್ತರ :** ಹಲಗಲಿಯ ನಾಲ್ವರು ಪ್ರಮುಖರು ಪೂಜೇರಿ ಹನುಮಾ, ಬ್ಯಾಡರಬಾಲ, ಜಡಗ , ರಾಮ.

**3. ಹಲಗಲಿ ಗುರುತು ಉಳಿಯದಂತಾದುದು ಏಕೆ ?**

**ಉತ್ತರ :** ಕುಂಪಣಿ ಸರ್ಕಾರದ ದಂಡು ಹಲಗಲಿಗೆ ಬೆಂಕಿ ಹಚ್ಚಿ ಸುಟ್ಟು ಬೂದಿ ಮಾಡಿದ್ದರಿಂದ ಗುರುತು ಉಳಿಯದಂತಾಯಿತು.

**4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?**

**ಉತ್ತರ :** ಹಲಗಲಿಯ ಬಂಟರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.

**5. ಹಲಗಲಿ ಗ್ರಾಮ ಎಲ್ಲಿದೆ ?**

**ಉತ್ತರ :** ಹಲಗಲಿ ಗ್ರಾಮ ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

**II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?**

**ಉತ್ತರ :** ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು. ಈ ಆದೇಶದ ಪ್ರಕಾರ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಗೆ ಬಂದು ಜೋರ ಮಾಡಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಹೋದರು. ಇದನ್ನು ವಿರೋಧಿಸಿ ರಾಮ, ಬಾಲ, ಹನುಮ, ಜಡಗ ಮೊದಲಾದ ಹಲಗಲಿ ಬೇಡರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದರು.

2. **ಹಲಗಲಿಗೆ ದಂಡು ಬರಲು ಕಾರಣವೇನು ?**

**ಉತ್ತರ :** ಹಲಗಲಿಯ ಬೇಡರು ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದು ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆದರು ಇದರಿಂದ ಬ್ರಿಟೀಷ್ ಸೈನಿಕರು ದಂಗು ಹಿಡಿದು ದೂರ ಸರಿದು ನಿಂತರು. ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ (ಜೆ..ಬಿ.ಸೆಬಿ. ಸೆಟೆನ್ಕರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳಿಸಿದನು. ಆಗ ದಂಡು ತಯಾರಾಗಿ ಹಲಗಲಿಗೆ ಬಂದಿತು.

3. **ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?**

**ಉತ್ತರ :** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷರ ದಂಡು ಹಲಗಲಿಗೆ ಬಂದಿತು. ಬ್ರಿಟಿಷರ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಕ್ಕದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿಹೋದರು.

4. **ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?**

**ಉತ್ತರ:** ಲಾವಣಿಗಳನ್ನು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ವೀರಕಲಿಗಳ ವೀರಸಾಹಸ, ವೀರರ ಉಜ್ವಲ ಜೀವನದ ಘಟನೆಗಳನ್ನಾಧರಿಸಿದ ಕಥನಾತ್ಮಕ ಕಾವ್ಯಗಳಾಗಿದ್ದು ಸಾಮಾನ್ಯವಾಗಿ ವೀರತನ ಹಾಗೂ ಸಾವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನಲಾಗಿದೆ.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. **"ಎಲ್ಲ ಜನರಿಗೆ ಜೋರ ಮಾಡಿಕಸಿದು ಕೊಳ್ಳಿರಿ ಹತಾರ "**

**ಆಯ್ಕೆ:** ಈ ವಾಕ್ಯವನ್ನು ಡಾ.ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ನೀಡಿರುವ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಇದು ಕುಂಪಣಿ ಸರ್ಕಾರ ಹೊರಡಿಸಿದ ಆದೇಶದ ವಾಕ್ಯವಾಗಿದೆ. ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ವಿದೇಶದಿಂದ ಕುಂಪಣಿ ಸರ್ಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು. ಇದನ್ನು ವಿರೋಧಿಸಿ ಹಲಗರ ಹಳ್ಳಿ ಸುತ್ತಾಮುತ್ತಾ ಮೆರೆಯಿತು ಎಂದು ಲಾವಣಿಕಾರ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಭಾರತೀಯರನ್ನು ನಿಶ್ಶಸ್ತ್ರೀಕರಣಗೊಳಿಸಬೇಕೆಂಬ ಕುಂಪಣಿ ಸರ್ಕಾರದ ದರ್ಪ ಈ ವಾಕ್ಯದಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

2. **"ಜೀವಸತ್ತು ಹೋಗುವುದು ಗೊತ್ತ"**

**ಆಯ್ಕೆ :** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ನೀಡಿರುವ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಇದು ಹಲಗಲಿ ಬೇಡರು ಹೇಳಿದ ಮಾತಾಗಿದೆ. ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿದಾಗ, ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರಬಾಲ, ಜಡಗ ರಾಮ ಎಂಬ ನಾಲ್ಕುಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯುಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ ನಮ್ಮ ಜೀವ ಸತ್ತು ಹೋಗುತ್ತದೆ ಎಂದು ಪಿತೂರಿ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದವು, ಅವು ಹೋದರೆ ನಮ್ಮ ಪ್ರಾಣಕ್ಕೆ ಸಂಚಕಾರ ಎಂಬ ಭಾವನೆ ಹಲಗಲಿಯ ಬೇಡರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಂತೆ ಇದೆ.

3. **"ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ "**

**ಆಯ್ಕೆ :** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ನೀಡಿರುವ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಅದೆ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗು ಬಡಿಯಲು ಬ್ರಿಟಿಷ್ರ ದಂಡು ಹಲಗಲಿಗೆ ಬಂದಿತು. ಬ್ರಿಟಿಷ್ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಹಲಗಲಿಯ ಬೇಡರ ಮೇಲೆ ಗುಂಡುಹಾರಿಸಿ ಕೊಲ್ಲುವ ಬ್ರಿಟಿಷ ಸೈನಿಕರ ನಿಷ್ಕಕರುಣಾಭಾವ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿತವಾಗಿದೆ.

4. **"ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು "**

**ಆಯ್ಕೆ :** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದು ನೀಡಿರುವ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಬ್ರಿಟಿಷರ ಸೈನಿಕರು ಹಲಗಲಿಯನ್ನು ಲೂಟಿಮಾಡಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದ್ದರಿಂದ ಹಲಗಲಿಯು ಎಳ್ಳಷ್ಟು ಗುರುತು ಉಳಿಯದೆ ಕಾಣದೆ ಹಾಳಾಗಿ ಹೋಯಿತು. ಇದನ್ನು ಕುರ್ತು ಕೋಟಿಯ ಕಲ್ಮೇಶನ ದಯದಿಂದ ನಾನು ಕಂಡೊಷ್ಟು ವರ್ಣಿಸಿ ಹೇಳಿದೆ ಎಂದು ಲಾವಣಿಕಾರ ಹಾಡಿದ ಸುಂದರವಾಗಿದೆ.

**ಸ್ವಾರಸ್ಯ :** ಹಲಗಲಿ ಬೇಡರು ಹೋರಾಡಿ ಕೆಟ್ಟು ಹೋದ ವಿಚಾರವನ್ನು ಕಂಡಷ್ಟು ವರ್ಣಿಸಿದ್ದೇನೆ ಎಂದು ಹೇಳಿರುವುದು ಸ್ವಾರಸ್ಯ ಪೂರ್ಣವಾಗಿದೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿ ಸಕ್ಕಾರಿಬೆಲ್ಲಾ
ಗಂಗಳ ಚೆರಗಿ ಮಂಗಳಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತುವರ್ಣಿಸಿ ಹೇಳಲಿ ನಾನೆಷ್ಟಾ

ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟೂ
ಕಾಣದೆ ಹೋಯಿತೊ ಕೆಟ್ಟುವರ್ಣಿಸಿ ಹೇಳಿದೆ ಕಂಡಷ್ಟು
ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ

* * *

# ಪದ್ಯ ಭಾಗ–04 : ಕೌರವೇಂದ್ರನ ಕೊಂದೆ ನೀನು

**ಕವಿ ಪರಿಚಯ:–**

ಕುಮಾರವ್ಯಾಸ ಎಂದು ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪನು ಕ್ರಿ. ಶ. ಸುಮಾರು 1430ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದನು.

- ಇವನು ಕರ್ನಾಟ ಭಾರತ ಕಥಾ ಮಂಜರಿ ಮತ್ತು ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾನೆ.
- ಈತನು ತನ್ನ ಕೃತಿಯಲ್ಲಿ ರೂಪಕಾಲಂಕಾರವನ್ನೂ ಹೆಚ್ಚಾಗಿ ಬಳಸಿದ್ದರಿಂದ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ಪಡೆದಿದ್ದಾನೆ.
- ಕರ್ನಾಟ ಭಾರತ ಕಥಾಮಂಜರಿ ಕೃತಿಯನ್ನು ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ.

**I. ಒಂದು ವಾಕ್ಯದಲ್ಲಿ ಉತ್ತರಿಸಿ**

**1. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**

**ಉತ್ತರ :** ಕೃಷ್ಣನು ಕರ್ಣನ ಸಂಗಡ ಸರಸವನ್ನು ಮಾಡಿ ಕೈ ಹಿಡಿದು ಎಳೆದು ರಥದ ಪೀಠದಲ್ಲಿ ಕೂರಿಸಿದನು.

**2. ಕುಮಾರವ್ಯಾಸನ ಆರಾಧ್ಯದೈವ ಯಾರು?**

**ಉತ್ತರ :** ಕುಮಾರವ್ಯಾಸನ ಆರಾಧ್ಯ ದೈವ ಗದುಗಿನ ವೀರನಾರಾಯಣ.

**3. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?**

**ಉತ್ತರ :** ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

**4. ಕುಮಾರ ವ್ಯಾಸನಿಗಿರುವ ಬಿರುದು ಯಾವುದು ?**

**ಉತ್ತರ :** ಕುಮಾರವ್ಯಾಸನಿಗೆ ಇರುವ ಬಿರುದು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಇದೆ.

**5. ನಾರಾಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?**

**ಉತ್ತರ :** ನಾರಾಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ಕರ್ಣಾಟ ಭಾರತ ಕಥಾಮಂಜರಿ ಎಂಬ ಕೃತಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿದೆ.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?**

**ಉತ್ತರ :** ಕರ್ಣ ನಿಮಗೂ (ಪಾಂಡವರಿಗೂ) ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತಾ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನು ಬಿತ್ತಿದನು.

**2. ಕುಂತಿ, ಮಾದ್ರಿಯರು ಯರ‍್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**

**ಉತ್ತರ :** ಕುಂತಿಯು ಯಮ ಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನಿ ದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

**3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?**

**ಉತ್ತರ :** ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳ ಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನಿಗೆ ಕೇಡಾಯಿತು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ ಸುಮ್ಮನೆ ಹೋಗುವುದೇ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದು ಕೊಂಡನು.

**4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

**ಉತ್ತರ :** ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ ಪಾಂಡವರು ಕೌರವರು ಸೇವೇಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸಿ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ಧುರ್ಯೋಧನನ್ನು ಕೊಂದೆ " ಎಂದನು.

**5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?**

**ಉತ್ತರ :** ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತು ದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕರಾದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು ಸೂರ್ಯನ ಮೇಲಾಣೆ ಪಾಂಡವರನ್ನ ನೋಯಿಸೆನು" ಎಂದನು.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. **"ರವಿಸುತನ ಕಿವಿಯಲಿ ಬಿತ್ತಿದನು ಭಯವ"**

**ಆಯ್ಕೆ** : ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಾಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದು 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ .

**ಸ್ವಾರಸ್ಯ** : "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜನೀನು, ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ .

2. **" ಬಾಯ್ದಂಬುಲಕೆ ಕೈಯಾನುವರೆ"**

**ಆಯ್ಕೆ** : ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಾಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದು 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣ ಕರ್ಣನಿಗೆ ಹೇಳುತ್ತಾನೆ .

**ಸ್ವಾರಸ್ಯ** : ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ಧುರ್ಯೋಧನನ ಬಾಯೆಂಜಲು ಕೈಯೊಡ್ಡುವುದು ಸರಿಯೇ ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

3. **"ಜೀಯ ಹಸಾದವೆಂಬುದು ಕಷ್ಟ"**

**ಆಯ್ಕೆ** : ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಾಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾ ಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದು 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈಮಾತನ್ನು ಕೃಷ್ಣ ಕರ್ಣನಿಗೆ ಹೇಳುತ್ತಾನೆ .

**ಸ್ವಾರಸ್ಯ** : "ಕರ್ಣ ನಿನ್ನ ಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗದ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಪ್ರಸಾದವೆಂಬುದು ಕಷ್ಟವಾಗುವುದಿಲ್ಲವೇ?" ಎಂದು ಕೃಷ್ಣನು ಸ್ವಾರಸ್ಯ ಪೂರ್ಣವಾಗಿ ಹೇಳುತ್ತಾನೆ .

4. **" ಮಾರಿ ಗೌತಣವಾಯ್ತು ನಾಳಿನ ಭಾರತವು "**

**ಆಯ್ಕೆ** : ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಾಣಪ್ಪನು ರಚಿಸಿರುವ 'ಕರ್ಣಾಟ ಭಾರತ ಕಥಾ ಮಂಜರಿ' ಎಂಬ ಮಹಾಕಾವ್ಯದಿಂದ ಆಯ್ದು 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲವಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ .

**ಸ್ವಾರಸ್ಯ** : ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

## ಪದ್ಯ ಭಾಗವನ್ನು ಪೂರ್ಣಗೊಳಿಸಿ

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆ ದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

* * *

# ಪದ್ಯ ಭಾಗ–05 : ಹಸುರು

**ಕವಿ ಪರಿಚಯ:–**

**ಕುವೆಂಪು :** ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯವರು. ಜನನ 1904 ಡಿಸೆಂಬರ್ 29.

**ಕೃತಿಗಳು :** ಕೊಳಲು, ಪಾಂಚಜನ್ಯ , ಪ್ರೇಮ ಕಾಶ್ಮೀರ, ಪಕ್ಷಿಕಾಶಿ ಕವನಸಂಕಲನಗಳು, ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು–ಕಥಾ ಸಂಕಲನಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು– ಕಾದಂಬರಿಗಳು. ರಸೋವೈಸಃ, ತಪೋನಂದನ–ವಿಮರ್ಶಾಸಂಕಲನಗಳು, ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ–ಮಕ್ಕಳ ಪುಸ್ತಕಗಳು, ಜಲಗಾರ, ಯಮನ ಸೋಲು, ಬೆರಳೆಕೊರಳ್–ನಾಟಕಗಳು, ನೆನಪಿನ ದೋಣಿಯಲ್ಲಿ – ಆತ್ಮಕಥನ. ಶ್ರೀಯುತರಿಗೆ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 1968ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಧಾರವಾಡದಲ್ಲಿ ನಡೆದ 1957ರ ಮೂವತ್ತೊಂಬತ್ತನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇವರಿಗೆ 1964 ರಲ್ಲಿ ರಾಷ್ಟ್ರಕವಿ, 1988ರಲ್ಲಿ ಪಂಪ ಪ್ರಶಸ್ತಿ, 1991ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ದೊರೆತಿದೆ. ಪ್ರಸ್ತುತ ಪದ್ಯಭಾಗವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?**

**ಉತ್ತರ :** ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

**2. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?**

**ಉತ್ತರ :** ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ .

**3. 'ಹಸುರು ' ಎಂಬುದು ಯಾವುದನ್ನು ಕಂಡು ಪ್ರೇರಿತ ವಾದ ಕವನವಾಗಿದೆ ?**

**ಉತ್ತರ :** 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ .

**4. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?**

**ಉತ್ತರ :** ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ ?**

**ಉತ್ತರ :** ಕವಿಗೆ ನವರಾತ್ರಿಯಲ್ಲಿ, ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸ ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ ಹಕ್ಕಿಯ ಕೊರಲಿನಲ್ಲಿ, ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.

**2. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?**

**ಉತ್ತರ :** ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಗೋಚರವಾದರೆ, ಹೂವಿನ ಕಂಪಿನ ಹಸುರು ಮೂಗಿಗೆ, ಎಲರಿನ ತಂಪಿನ ಸ್ಪರ್ಷ ಚರ್ಮಕ್ಕೆ, ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ ಕಿವಿಗೆ ಶ್ಯಾಮಲ ಸಮುದ್ರದ ಹಸುರು ಕವಿ ಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಿಗೆಗೆ ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರಿಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತಪೂರ್ಣವಾಗಿ ವರ್ಣಿಸಿದ್ದಾರೆ.

**3. ಕವಿಯಾತ್ಮವು ಹಸುರು ಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು ?**

**ಉತ್ತರ :** ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ನವರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ; ಹಸುರು ಮುಗಿಲು; ಹಸುರು ಗದ್ದೆಯ ಬಯಲು, ಹಸುರಿನಮಲೆ; ಹಸುರು ಕಣಿವೆ: ಸಂಜೆಯ ಬಿಸಿಲು, ಅಶ್ವಜದ ಶಾಲಿ ವನದ ಗಿಳಿಯ ಹಸುರು ಬಣ್ಣದನೋಟ; ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದ್ದು ಹೊಸ ಹೂವಿನ ಕಂಪು; ತಂಗಾಳಿಯ ತಂಪು: ಹಕ್ಕಿಯ ಇಂಪಾದಗಾನ; ಎತ್ತೆತ್ತ ನೋಡಿದರೂ ಹಸುರು ಹಸುರು. ಹಸರು.. ಈ ಇವೆಲ್ಲಾ ಕವಿಯಾತ್ಮವು ಹಸುರು ಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾದವು.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**1. "ಹಸುರಾದುದು ಕವಿಯಾತ್ಮಂ"**

**ಆಯ್ಕೆ :** ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ನವರಾತ್ರಿಯ ನವದಾತ್ರಿಯ ಈ ಶ್ಯಾಮಲ ವರ್ಣದ ಕಡಲಿನಲ್ಲೂ ಕವಿಯ ಆತ್ಮ ಹಸುರಾಯಿತು, ರಸ ಪಾನದಲ್ಲಿ ಮಿಂದಿತು ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಅವಿನಾಭಾವ ಸಂಬಂಧವನ್ನು ತೋರಿಸುತ್ತದೆ.

**ಸ್ವಾರಸ್ಯ :** ನವರಾತ್ರಿಯ ಕಪ್ಪುಕಡಲಿನಲ್ಲೂ ಹಸುರನ್ನು ಕಾಣುವ ಕುವೆಂಪು ಅವರ ಕವಿಯಾತ್ಮದ ಪ್ರಕೃತಿಯ ರಸಾಸ್ವಾದನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. **"ಬೇರೆ ಬಣ್ಣವನೆ ಕಾಣೆ "**

**ಆಯ್ಕೆ :** ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ .

**ಸಂದರ್ಭ :** ಅಶ್ವಿಜಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಆಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ :** ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ 'ಬೇರೆ ಬಣ್ಣಗಳೇ ಕಾಣದಾದವು' ಎಂದು ಹೇಳಿರುವಲ್ಲಿ ಅವರ ರಸಾಸ್ವಾದನೆಯ ಔನ್ನತ್ಯವನ್ನು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

3. **"ಹಸುರುಹಸುರಿಳೆಯುಸಿರೂ" ಹಳತ**

**ಆಯ್ಕೆ :** ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿರುವ ಹಸುರು ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಹೊಸ ಹೂವಿನ ಕಂಪು, ಬೀಸುವ ಗಾಳಿಯ ತಂಪು, ಹಕ್ಕಿಯ ಕೊರಲಿನಿಂದ ಹೊರಟಗಾನದ ಇಂಪು, ಅಲ್ಲದೆ ಇಡೀ ಭೂಮಿಯ ಶ್ವಾಸವೆಲ್ಲಾ ಹಸುರುಮಯವಾಗಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಇಲ್ಲಿ ಹೂವು-ಗಾಳಿಹಕ್ಕಿಯ ಗಾನಗಳಲ್ಲಿ ಬೇರೆಬೇರೆ ಅನುಭವವಿದ್ದರೂ ಕವಿಯ ಏಕತಾ ದೃಷ್ಟಿಯಲ್ಲಿ ಎಲ್ಲದರಲ್ಲೂ ಹಸುರೇ ಕಾಣುತ್ತದೆ .

**ಸ್ವಾರಸ್ಯ :** ಹಸುರು ಸರ್ವೇಂದ್ರಿಯಗಳನ್ನೂ ವ್ಯಾಪಿಸಿದೆ ಎಂದು ವರ್ಣಿಸಿರುವ ಕವಿಯ ಕಲ್ಪನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

4. **"ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್ "**

**ಆಯ್ಕೆ :** ಈ ವಾಕ್ಯವನ್ನು ಕುವೆಂಪು ಅವರ 'ಪಕ್ಷಿಕಾಶಿ' ಕವನ ಸಂಕಲನದಿಂದ ಆರಿಸಲಾಗಿರುವ 'ಹಸುರು' ಎಂಬ ಪದ್ಯದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ಅತ್ತ–ಇತ್ತ–ಎತ್ತಲೂ ಹಸುರೇ ಆವರಿಸಿರುವುದನ್ನು ಕವಿ ದೃಷ್ಟಿಯಿಂದ ನೋಡಿದ ಕುವೆಂಪು ಅವರು 'ಕಡಲಿನಲ್ಲಿ ಎಲ್ಲೆಲ್ಲೂ ಹಸುರೇ ಹಸುರು. ಕವಿಯ ಆತ್ಮ ಹಸುರು ನೆತ್ತರಿನಿಂದ ಹಸುರು ಗಟ್ಟಿತು' ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಎಲ್ಲೆಲ್ಲೂ ಹಸುರನ್ನು ಕಂಡ ಕವಿಯಾತ್ಮವು ಹಸುರು ಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರೇ ! ಎಂದು ವರ್ಣಿಸಿದ್ದಾರೆ.

**ಸ್ವಾರಸ್ಯ :** ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಅದೇ ಕಾರಣ. ಪ್ರಕೃತಿಗಷ್ಟೇ ಅಲ್ಲದೆ' ರಕ್ತದಲ್ಲೂ ಹಸುರು ವ್ಯಾಪಿಸಿದೆ ' ಎಂದು ಸ್ವಾರಸ್ಯಪೂರ್ಣವಾಗಿದೆ

**ಪದ್ಯವನ್ನು ಕಂಠ ಪಾಠ ಮಾಡಿ**

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಸಿಲೂ

* * *

# ಪದ್ಯ ಭಾಗ–06 : ಛಲಮನೆ ಮರೆವೆಂ

**ಕವಿ ಪರಿಚಯ:–**

ರನ್ನ ಕ್ರಿ.ಶ. ಸುಮಾರು 949ರಲ್ಲಿ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು, ಇವನ ತಂದೆ ಜಿನವಲ್ಲಭ , ತಾಯಿ ಅಬ್ಬಲಬ್ಬೆ.

ಇವನು 'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತ ತೀರ್ಥಂಕರ ಪುರಾಣ ತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ' ಎಂಬ ಕಾವ್ಯಗಳನ್ನು ಬರೆದಿದ್ದಾನೆ. ರನ್ನ ಕಂದ ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಇವನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೊಟ್ಟನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನು. 'ಛಲಮನೆ ಮೆರೆವಂ' ಎಂಬ ಪದ್ಯಭಾಗವನ್ನು ರನ್ನನ 'ಸಾಹಸಭೀಮವಿಜಯಂ' ಎಂಬ ಮಹಾಕಾವ್ಯ ಭಾಗದ ಐದನೆಯ ಆಶ್ವಾಸದಿಂದ ಆರಿಸಿಕೊಳ್ಳಲಾಗಿದೆ.

## I ಒಂದು ವಾಕ್ಯದಲ್ಲಿ ಉತ್ತರಿಸಿ

**1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು ?**

**ಉತ್ತರ :** ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಭೀಷ್ಮಾಚಾರ್ಯರಿಗೆ ಹೇಳುವನು.

**2. ದಿನಪಸುತ ಎಂದರೆ ಯಾರು ?**

**ಉತ್ತರ :** ದಿನಪಸುತ ಎಂದರೆ ಕರ್ಣ.

**3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?**

**ಉತ್ತರ :** ಅರ್ಜುನ ಮತ್ತು ಭೀಮ ಇಬ್ಬರನ್ನೂ ಕೊಂದ ಬಳಿಕ ಸಂಧಿಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

**4. ಛಲವನ್ನೇ ಮರೆಯುವುದಾಗಿ ನಿರ್ಧರಿಸಿದವನು ಯಾರು ?**

**ಉತ್ತರ :** ಛಲವನ್ನೇ ಮರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.

**5. ಅಂತಕಾತ್ಮಜ ಎಂದರೆ ಯಾರು ?**

**ಉತ್ತರ :** ಅಂತಕಾತ್ಮಜ ಎಂದರೆ ಧರ್ಮರಾಯ.

## II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

**1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?**

**ಉತ್ತರ :** ದುರ್ಯೋಧನನನನ್ನು ಭೀಷ್ಮಾಚಾರ್ಯರಿಗೆ "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮರೆಯುತ್ತೇನೆ" ಎಂದು ಹೇಳುತ್ತಾನೆ.

2. **ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ ?**

**ಉತ್ತರ :** ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನು ಅದಕ್ಕೆ ಒಪ್ಪುವುದಿಲ್ಲ. ಅವನು "ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹ ಬಾಳ್ವೆ ಮಾಡುವುದಿಲ್ಲ" ಎನ್ನುತ್ತಾನೆ.

3. **ಪಾರ್ಥ – ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?**

**ಉತ್ತರ:** "ನನ್ನ ಪ್ರೀತಿಯ ಗೆಳೆಯ ಕರ್ಣನನ್ನು ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ – ಭೀಮರು ಬದುಕಿರುವವರೆಗೆ ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ: ನಾನು ಸಂಧಿಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿಮಾಡಿಕೊಳ್ಳುತ್ತೇನೆ" ಎಂಬುದು ಪಾರ್ಥ–ಭಿಮರ ಬಗೆಗೆ ದುರ್ಯೋಧನನ ಅಭಿಪ್ರಾಯವಾಗಿದೆ .

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. **"ನೆಲಕಿರೆನೆಂದು ಬಗಿದಿರೆ ಛಲಕ್ಕಿರೆವೆಂ"**

**ಆಯ್ಕೆ :** ಈ ವಾಕ್ಯವನ್ನು ಮಹಾ ಕವಿ ರನ್ನ ಬರೆದಿರುವ 'ಸಾಹಸಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆರೆವಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಭೀಷ್ಮಾಚಾರ್ಯರು ಪಾಂಡವರನ್ನು ಒಪ್ಪಿಸುತ್ತೇನೆ. ಸಂಧಿಮಾಡಿಕೋ ಎಂದು ಹೇಳಿದಾಗ ದುರ್ಯೋಧನನು "ಅಜ್ಜಾ, ನಾನು ಈ ಭೂಮಿಗಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಬಿದ್ದ ನೆಲಕ್ಕೆ ಸಮ" ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ದುರ್ಯೋಧನನ ಈ ಮಾತಿನಲ್ಲಿ ನಶ್ವರವಾದ ಅರಸುತನಕ್ಕಿಂತ ಛಲದಿಂದ ಬಾಳುವುದೇ ನಿಜವಾದ ಕ್ಷತ್ರಿಯನಗುಣ. ಸಂಧಿಮಾಡಿಕೊಳ್ಳುವುದು ಹೇಡಿತನದ ಲಕ್ಷಣ ಎಂಬ ಧ್ವನಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

2. **" ಸಮರದೊಳೆನಗಜ್ಜ ಪೇಳೆ ಮಾವುದು ಕಜ್ಜಂ."**

**ಆಯ್ಕೆ :** ಈ ವಾಕ್ಯವನ್ನು ಮಹಾ ಕವಿ ರನ್ನ ಬರೆದಿರುವ 'ಸಾಹಸ ಭೀಮ ವಿಜಯಂ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆರೆವಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಭೀಷ್ಮಾಚಾರ್ಯರು ನೀನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿದ್ದಂತೆ ನಡೆಯುವ ಹಾಗೆ ಮಾಡುವೆನು. ಈಗಲೂ ಕೂಡ ಅವರು ನಮ್ಮ ಮಾತನ್ನು ಮೀರದೆ ಪಾಲಿಸುತ್ತಾರೆ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊಳ್ಳಬೇಕು ಎಂದು ಭೀಷ್ಮರು ಹೇಳಿದಾಗ ದುರ್ಯೋಧನನು ಮುಗುಳು ನಗೆ ನಕ್ಕು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : "ಸಮರದೊಳೆನಗಜ್ಜ ಪೇಪೆಮಾವುದುಕಜ್ಜಂ" ಎಂದು ಹೇಳುವ ದುರ್ಯೋಧನನ ಮಾತಿನಲ್ಲಿ' ಸಂಧಿಮಾಡಿಕೊಳ್ಳುವ ಮಾತೊಂದನ್ನು ಬಿಟ್ಟು. ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿ''ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. ಏಕೆಂದರೆ ದುರ್ಯೋಧನನಿಗೆ ಇಷ್ಟವಾಗದ ಒಂದು ಮಾತು " ಸಂಧಿ".

3. **" ಪಾಂಡವರೊಳಿದು ಛಲಮನೆ ಮೆರೆವೆಂ".**

**ಆಯ್ಕೆ** : ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆಮೆರೆವಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆಯಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ದುರ್ಯೋಧನನ ತನಗೆ ಕೋಪ ಹೆಚ್ಚಾಗಲು ಕಾರಣವನ್ನು ನೀಡಿರುವುದಲ್ಲದೆ ತನ್ನ ಸಹೋದರರು ಸತ್ತಿಲ್ಲ. ಅವರು ಮತ್ತೆ ಹುಟ್ಟಿ ಬರುವರೆಂಬ ನಂಬಿಕೆ ಹೊಂದಿರುವುದು ಹಾಗೂ ಛಲಕ್ಕಾಗಿ ಹೋರಾಡುವ ಆತನ ನಿಲುವು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4. **" ಮೇಣಾಯ್ತು ಕೌರವಂಗವನಿತಳಂ''.**

**ಆಯ್ಕೆ** : ಈ ವಾಕ್ಯವನ್ನು ಮಹಾಕವಿ ರನ್ನ ಬರೆದಿರುವ 'ಸಾಹಸಭೀಮ ವಿಜಯ' ಎಂಬ ಕೃತಿಯಿಂದ ಆರಿಸಲಾಗಿರುವ 'ಛಲಮನೆ ಮೆರೆವಂ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಸಂಧಿಗೆ ಒಪ್ಪದ ದುರ್ಯೋಧನನು, ಅಜ್ಜ, ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಆದ್ದರಿಂದ ಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನದಾಗಬೇಕು ಎಂದು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .

**ಸ್ವಾರಸ್ಯ** : ತನ್ನ ಕೊನೆಯುಸಿರು ಇರುವವರೆಗೂ ಪಾಂಡವರ ವಿರುದ್ಧ ಹೋರಾಡುತ್ತೇನೆಂಬ ದುರ್ಯೋಧನನ ದಿಟ್ಟ ನಿರ್ಧಾರ, ಪಾಂಡವರ ಮೇಲಿನ ಕೋಪದ ತೀವ್ರತೆ ಈ ಸಂದರ್ಭದಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**ಪದ್ಯ ಭಾಗವನ್ನು ಪೂರ್ಣಗೊಳಿಸಿ**

ನೆಲಕಿರುವೆನೆಂದು ಬಗೆದಿರೆ
ಚಲಕಿರಿವೆಂ ಪಾಂಡುಸತರೊಳೀನೆಲಸಿದು ಪಾ
ಳ್ಸೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಿಪೆವೇ

* * *

# ಪದ್ಯ ಭಾಗ–07 : ವೀರಲವ

**ಕವಿ ಪರಿಚಯ:–**

ಕವಿ ಲಕ್ಷ್ಮೀಶನು ಕ್ರಿ.ಶ. ಸುಮಾರು 1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು. ಇವನಿಗೆ ಲಕ್ಷ್ಮೀ ರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು. ಇವರು 'ಜೈಮಿನಿ ಭಾರತ' ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ ಉಪಮಾಲೋಲ, ಕರ್ಣಾಟಕ ಕವಿ ಚೂತವನ ಚೈತ್ರ ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ

1. **'ಜೈಮಿನಿ ಭಾರತ ' ಕಾವ್ಯವನ್ನು ಬರೆದ ಕವಿ ಯಾರು ?**

   **ಉತ್ತರ :** ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ.

2. **ಯಜ್ಞಾಶ್ವವನ್ನು ಕಟ್ಟಿದವರು ಯಾರು ?**

   **ಉತ್ತರ :** ಯಜ್ಞಾಶ್ವವನ್ನು ಕಟ್ಟಿದವರು ಲವ

3. **ಕುದುರೆಯನ್ನು ಅವನು ಯಾವುದರಿಂದ ಕಟ್ಟಿದನು ?**

   **ಉತ್ತರ :** ಕುದುರೆಯನ್ನು ಅವನು ತನ್ನ ಉತ್ತರೀಯದಿಂದ ಕಟ್ಟಿದನು.

4. **ಮುನಿಸುತರು ಹೆದರಲು ಕಾರಣವೇನು ?**

   **ಉತ್ತರ :** ಅವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. **ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

   **ಉತ್ತರ :** ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆಯ ಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳ ಹೊಕ್ಕಿತು.

**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?**

**ಉತ್ತರ :** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಭೂಮಂಡಲದಲ್ಲಿ ಕೌಸಲ್ಯಯು ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ ಎಂದ ಬರೆಯಲಾಗಿತ್ತು.

**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

**ಉತ್ತರ :** ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿಹಾಕಿದ್ದನ್ನು ಕಂಡು ಹೆದರಿದ ಮುನಿಸುತರು “ಬೇಡ ಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು” ಎಂದು ಹೇಳಿದರು. ಆಗ ಅವನು ನಗುತ “ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ” ಎಂದು ಶೌರ್ಯದಿಂದ ಹೇಳಿದನು.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

**1. “ ರಘದಹನಸೊಲ್ಗೋಳಿನ ಮಿಸಲ್”**

**ಆಯ್ಕೆ :** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ಜೈಮಿನಿ ಭಾರತ ಮಹಾಕಾವ್ಯದಿಂದ ಆಯ್ದ ‘ವೀರಲವ’ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಶ್ರೀರಾಮನ ಅಶ್ವಮೇಧಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**2 “ತನ್ನ ಮಾತೆಯಂ ಸರ್ವ ಜನಮುಂ ಬಂಜೆಯೆನ್ನ ದಿರ್ದಪುದೆ”**

**ಆಯ್ಕೆ :** ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ‘ಜೈಮಿನಿ ಭಾರತ’ ಮಹಾಕಾವ್ಯದಿಂದ ಆಯ್ದ ‘ವೀರಲವ’ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿ ಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

3. **“ ಅರಸುಗಳ ವಾಜಿಯ ಬಿಡು ”**

**ಆಯ್ಕೆ** : ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ‘ಜೈಮಿನಿ ಭಾರತ’ ಮಹಾಕಾವ್ಯದಿಂದ ಆಯ್ದ ‘ವೀರಲವ’ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿಹಾಕಿದ ಸಂದರ್ಭದಲ್ಲಿ ಮುನಿಪುತರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : ರಾಜನ ಯಜ್ಞಾಶ್ವವನ್ನು ಕಟ್ಟಿ ಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ತರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

4. **“ಜಾನಕಿಯ ಮಗನಿದಕೆ ಬೆದರುವನೆ ”**

**ಆಯ್ಕೆ** : ಈ ವಾಕ್ಯವನ್ನು ಕವಿ ಲಕ್ಷ್ಮೀಶನು ರಚಿಸಿರುವ ‘ಜೈಮಿನಿ ಭಾರತ’ ಮಹಾಕಾವ್ಯದಿಂದ ಆಯ್ದ ‘ವೀರಲವ’ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ವೀರ ಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವರು ಹೇಳುತ್ತಾನೆ.

**ಸ್ವಾರಸ್ಯ** : ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**ಪದ್ಯ ಭಾಗವನ್ನು ಕಂಠಪಾಠ ಮಾಡಿ.**

ಊರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೂರ್ವನೇ ವೀರನಾತನ ಯಜ್ಞ ತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥

* * *

# ಪದ್ಯ ಭಾಗ–08 : ಕೆಮ್ಮನೆ ಮೀಸೆವೊತ್ತನೇ

**ಕವಿ ಪರಿಚಯ:–**

ಪಂಪ ಮಹಾಕವಿ (ಕ್ರಿ.ಶ.902) ವೆಂಗಿ ಮಂಡಲದ ವೆಂಗಿಪಳು ಎಂಬ ಆಗ್ರ ಹಾರದವನು ಪಂಪ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ ಎಂಬ ಮಹಾಕಾವ್ಯಗಳ ಕರ್ತೃ ವಿಕ್ರಮಾರ್ಜುನ ವಿಜಯಂ ಕಾವ್ಯಕ್ಕೆ ಪಂಪಭಾರತ ಎಂಬ ಮತ್ತೊಂದು ಹೆಸರಿದೆ. ಪಂಪ ರತ್ನತ್ರಯರಲ್ಲಿ ಒಬ್ಬ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ ಎಂಬ ಬಿರುದುಗಳನ್ನು ಪಡೆದಿದ್ದ ಕವಿ. [ಪಂಪಮಹಾಕವಿ ವಿರಚಿತ ವಿಕ್ರಮಾರ್ಜುನ ವಿಜಯಂ ಕಾವ್ಯವನ್ನು 'ಕೆಮ್ಮನೆ ಮೀಸೆವೊತ್ತನೇ' ಪದ್ಯ ಭಾಗವನ್ನು ಆಯ್ಕೆ ಮಾಡಲಾಗಿದೆ.

## I. ಒಂದು ವಾಕ್ಯದಲ್ಲಿ ಉತ್ತರಿಸಿ.

**1. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?**

**ಉತ್ತರ :** ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಹಣವನ್ನು ಬೇಡುವುದಕ್ಕಾಗಿ ಬಂದನು).

**2. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ?**

**ಉತ್ತರ :** ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.

**3. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು ?**

**ಉತ್ತರ :** ಪರಶುರಾಮನು ದ್ರೋಣನಿಗೆ ವಾರುಣ, ವಾಯುವ್ಯ, ಆಗ್ನೆಯ, ಐಂದಾದಿ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.

**4. ದ್ರುಪದನು ಪಡಿಯನಿಗೆ ಏನೆಂದು ಹೇಳಿ ಕಳುಹಿಸಿದನು ?**

**ಉತ್ತರ :** ಅಂತಹವನನ್ನು ನಾನು ತಿಳಿದಿಲ್ಲ : ಅವನನ್ನು ಹೊರಕ್ಕೆ ತಳ್ಳು ಎಂದು ದ್ರುಪದನು ಪಡಿಯನಿಗೆ (ದ್ವಾರಪಾಲಕನಿಗೆ) ಹೇಳಿದನು.

## II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?**

**ಉತ್ತರ :** ಪರಶುರಾಮನು ತನ್ನಲ್ಲಿದ್ದದ್ದನ್ನೆಲ್ಲಾ ಬೇಡಿದವರಿಗೆ ದಾನಮಾಡಿದ್ದರಿಂದ ಆತನ ಬಳಿಬಿಲ್ಲು ಬಾಣಗಳಲ್ಲದೆ ಬೇರೇನೂ ಇರಲಿಲ್ಲ. ಆ ಸಂದರ್ಭದಲ್ಲಿ ದ್ರೋಣನು ಅಶ್ವತ್ಥಾಮನ ಜೊತೆಯಲ್ಲಿ ಏನಾದರು ದ್ರವ್ಯ ಬೇಡಲೆಂದು ಪರಶುರಾಮನ ಬಳಿಗೆದನು. ಆಗ ಪರಶುರಾಮನು ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

2. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು ?

**ಉತ್ತರ :** ದ್ರುಪದನು ದ್ರೋಣರಿಗೆ "ನೀನು ಯಾರೆಂದು ನನಗೆ ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮ ಭೇದಕವಾಗುವಂತೆ ಹೀಯ್ಯಾಳಿಸಿದನು.

3. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು ?

**ಉತ್ತರ :** ದ್ರುಪದನ ಮಾತಿಗೆ ದ್ರೋಣನು ಎಲೋ ಏಳನೇ ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ. ಈ ಸಭಾ ವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನೀನು ಬೆಚ್ಚುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?" ಎಂದು ಪ್ರತ್ಯುತ್ತರ ಕೊಟ್ಟನು.

## III. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

1. ''ಈಗಳೊಂದಡಕೆಯುಮಿಲ್ಲ ಕೈಯೊಳ್''

**ಆಯ್ಕೆ :** ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆಮೀಸೆವೊತ್ತನೆ ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳಲ್ಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯೋಚಿಸಿದ ಸಂದರ್ಭದಲ್ಲಿ ಪರಶುರಾಮನು "ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು, ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದಡಕೆಯೂ ಇಲ್ಲ" ಎಂದು ದ್ರೋಣನಿಗೆ ಹೇಳುತ್ತಾನೆ.

**ಸ್ವಾರಸ್ಯ :** ದ್ರೋಣನು ತನ್ನ ಬಳಿ ಬಂದು ಸಹಾಯ ಯೋಚಿಸಿದಾಗ ಪರಶುರಾಮನು ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ನಿಜಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

2. ವಿದ್ಯಾಧನಮೆ ಧನಮಪ್ಪುದು

**ಆಯ್ಕೆ :** ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ದ್ರೋಣನು ತನ್ನ ಬಳಿ ಬಂದು ಸಹಾಯ ಯೋಚಿಸಿದಾಗ ಪರಶುರಾಮನು "ಎಲೈ ದ್ರೋಣನೆ ಈಗ ಇದೊಂದು ಬಿಲ್ಲು ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ನನ್ನಲ್ಲಿ ಬೇರೆ ಯಾವುದೇ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಹೇಳಿದ ಸಂದರ್ಭದಲ್ಲಿ ದ್ರೋಣನು "ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು" ಎಂದು ಹೇಳುತ್ತಾನೆ. ಯೋಚಿಸಿ ಹೇಳು ಎಂದು.

**ಸ್ವಾರಸ್ಯ :** ವಿದ್ಯಾಧನವೇ ನಿಜವಾದ ಸಂಪತ್ತು ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ .

3. **'ಎಂತು ನಾಣಿಲಿಗರಪ್ಪರೆ ಮಾನಸರ್ '**

**ಆಯ್ಕೆ** : ಈ ವಾಕ್ಯವನ್ನು ಪಂಪಮಹಾ ಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆಮೀಸೆವೊತ್ತನೇ ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ದ್ರೋಣನು ದ್ರುಪದನ ಬಳಿಗೆ ಹೋಗಿ "ಅಣ್ಣಾ ನೀನು ನಾನು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ?" ಎನ್ನಲು ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆ ಗೆಟ್ಟವರು ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಹೀಯ್ಯಾಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ 'ನೀನಾರೋ ನನಗೆ ತಿಳಿದಿಲ್ಲ' ಎಂದು ಹೇಳುವ ದ್ರೋಣನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4. **'ಜಲಕ್ಕನೀಗಳರಜಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ**

**ಆಯ್ಕೆ** : ಈ ವಾಕ್ಯವನ್ನು ಪಂಪಮಹಾಕವಿ ರಚಿಸಿರುವ 'ವಿಕಮಾರ್ಜುನ ವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ :** ತನ್ನ ಬಳಿ ಸಹಾಯ ಕೇಳಲು ಬಂದ ದ್ರೋಣನನ್ನು ಕುರಿತು ದ್ರುಪದನು "ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬಾಹಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ?" ಎಂದು ಹೀಯಾಳಿಸಿದ ಸಂದರ್ಭದಲ್ಲಿ ದ್ರೋಣನು" ಐಶ್ವರ್ಯವೆಂಬ ಮದವೇರಿದರೆ ಮಾತಿನಲ್ಲಿ ಮುಖದಲ್ಲಿ ವಕ್ರತೆ ಉಂಟಾಗುತ್ತದೆ ಸಂಬಂಧವನ್ನು ಐಶ್ವರ್ಯವು ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ನಾನು ತಕ್ಷಣವೇ ಸ್ಪಷ್ಟವಾಗಿ ಮರೆಯುವಂತೆ ಮಾಡುವುದು ; ತಿಳಿದೆನು" ಎಂದು ಹೇಳುತ್ತಾನೆ.

**ಸ್ವಾರಸ್ಯ** : ಸಮುದ್ರ ಮಥನ ಕಾಲದಲ್ಲಿ ಐಶ್ವರ್ಯ (ಲಕ್ಷಿ) ಮತ್ತು ಕಳ್ಳು (ಅಮೃತ/ಸುರಪಾನ) ಇವರಡೂ ಹುಟ್ಟಿದವು. ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು 'ದುಪದನ ಐಶ್ವರ್ಯಮದಕ್ಕೆ' ಅನ್ವಯ ಮಾಡಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ. ಕನ್ನಡ ದೀವಿಗೆ

5. **'ನೊಳವಿಂಗೆ ಕುಪ್ಪೆವರಂ'**

**ಆಯ್ಕೆ** : ಈ ವಾಕ್ಯವನ್ನು ಪಂಪ ಮಹಾಕವಿ ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಕೆಮ್ಮನೆ ಮೀಸೆವೊತ್ತನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ .

**ಸಂದರ್ಭ** : ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು "ಎಲೋ ಏಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು" ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ, ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?" ಎಂದು ಶಪಥ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : 'ನೊಣಕ್ಕೆ ಕಸವೇ ಶ್ರೇಷ್ಠ' ಎಂಬಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ– ನಡತೆ ಅಭಿರುಚಿಗಳಿರುತ್ತವೆ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

**ಪದ್ಯ ಭಾಗವನ್ನು ಕಂಠಪಾಠ ಮಾಡಿ**

ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಳೆಂತೆನೆಗೆ ಕೆಳೆಯನೇ ನೂಂ
ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ

* * *

# ಪೂರಕ ಪಾಠಗಳು

## ಪಾಠ–01 : ವಸಂತ ಮುಖ ತೋರಲಿಲ್ಲ

**I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**1. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ ?**

**ಉತ್ತರ :** ಪುಟ್ಟಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

**2. ಪುಟ್ಟಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?**

**ಉತ್ತರ :** ಪುಟ್ಟಪೋರಿಯ ಅಮ್ಮ ಗುಡಿಸಲಿನಲಿ ಮಲಗಿದ್ದಾಳೆ.

**3. ಯಾರಿಗೆ ವಸಂತ ಮುಖ ತೋರಲಿಲ್ಲ ?**

**ಉತ್ತರ :** ಕಮ್ಮಾರ, ನೇಕಾರ, ಕುಂಬಾರ, ಕೇರಿಯ ಮಾರ ಮತ್ತು ಪುಟ್ಟಿಗೆ ವಸಂತಮುಖ ತೋರಲಿಲ್ಲ.

**4. ಪುಟ್ಟಿಯ ಪ್ರಶ್ನೆಗಳೇನು ?**

**ಉತ್ತರ :** ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ? ಇವು ಪುಟ್ಟಿಯ ಪ್ರಶ್ನೆಗಳಾಗಿವೆ.

**5. ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?**

**ಉತ್ತರ :** ಮಾವಿನ ಮರಗಳು ಮೈ ತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಇಂಪಾಗಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಮಲ್ಲಿಗೆ ಹೂವು ಮುಗುಳುನಗೆ ಬೀರಿದೆ. ಹೊಳೆಯುವ ರಂಗೋಲಿಯಲ್ಲಿ ಬಾಲ ರವಿ ಥಳಥಳಿಸುತ್ತಿದ್ದಾನೆ. ಈರೀತಿ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

* * *

# ಪಾಠ–02 : ಭಗತ್ ಸಿಂಗ್

## I ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. **ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಎಂದು ನಡೆಯಿತು ?**

**ಉತ್ತರ :** ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಏಪ್ರಿಲ್ 13, 1919 ರಂದು ನಡೆಯಿತು.

2. **ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?**

**ಉತ್ತರ :** ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು 'ತ್ಯಾಗದ ಪ್ರತೀಕ' ಎಂದು ತೋರಿಸುತ್ತಾನೆ.

3. **ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು ?**

**ಉತ್ತರ :** ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಹೀಗಿದೆ : "ಏಪ್ರಿಲ್–13–1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ".

4. **ಭಗತ್‌ಸಿಂಗ್‌ನ ಸಹಚರರು ಯಾರು ?**

**ಉತ್ತರ :** ಭಗತ್‌ಸಿಂಗ್ ಸಹಚರರು ಸುಖದೇವ್, ರಾಜ್‌ಗುರು ಹಾಗು ಭಟಕೇಶ್ವರ ದತ್ತ

5. **ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ ?**

**ಉತ್ತರ :** ಭಗತ್ ಸಿಂಗ್ 23 ಮಾರ್ಚ್ 1931 ರಂದು 23ನೆಯ ವಯಸ್ಸಿನಲ್ಲಿ ಹುತಾತ್ಮನಾದನು.

## II. ಹೆಚ್ಚುವರಿ ಪ್ರಶ್ನೆಗಳು

1. **ಬಾಲಕ ಭಗತ್ ಸಿಂಗ್ ಮನಸ್ಸಿನಲ್ಲಿ ಸ್ವಾತಂತ್ರ ಹೋರಾಟದ ಕಿಚ್ಚನ್ನು ಹಚ್ಚಿದ ಘಟನೆ ಯಾವುದು ?**

**ಉತ್ತರ :** ಬಾಲಕ ಭಗತ್‌ಸಿಂಗ್ ಮನಸ್ಸಿನಲ್ಲಿ ಜಲಿಯನ್ ವಾಲಾಬಾಗ್ ಘಟನೆ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹಚ್ಚಿತು.

2. **ಜಲಿಯನ್ ವಾಲಾಬಾಗ್‌ನಲ್ಲಿ ಸಾವಿರಾರು ಜನರ ಪ್ರಾಣ ಹಾನಿಗೆ ಕಾರಣನಾದ ಬ್ರಿಟಿಷ್ ಅಧಿಕಾರಿ ಯಾರು ?**

**ಉತ್ತರ :** ಜಲಿಯನ್ ವಾಲಾಬಾಗ್‌ನಲ್ಲಿ ಸಾವಿರಾರು ಜನರ ಪ್ರಾಣ ಹಾನಿಗೆ ಕಾರಣನಾದ ಬ್ರಿಟಿಷ್ ಅಧಿಕಾರಿ ಜನರಲ್ ಡಯರ್.

**3. ಗುಂಡಿನ ಮಳೆಗರೆದು ಸಾವಿರಾರು ಜನರ ಪ್ರಾಣ ತೆಗೆದ ನಂತರ ಜನರಲ್ ಏನೆಂದು ಹೇಳಿಕೊಂಡನು? ಎಂದು ಹೇಳಿಕೊಂಡನು .**

**ಉತ್ತರ :** ಸಾವಿರಾರು ಜನರ ಪ್ರಾಣ ತೆಗೆದ ನಂತರ ಜನರಲ್ ಡಯರ್ "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ".

**9. ಬಾಲಕ ಭಗತ್ ಸಿಂಗ್ ಊಟ ಮಾಡದೆ ಉಪವಾಸವಿದ್ದುದಕ್ಕೆ ಕಾರಣವೇನು ?**

**ಉತ್ತರ :** ಏಪ್ರಿಲ್ 13, 1919ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಬಾಲಕ ಭಗತ್ ಸಿಂಗ್ ಹೋಗಿದ್ದನು. ಆಗ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ. ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಹಿಂತಿರುಗಿದ. ಜಲಿಯನ್ ವಾಲಾಬಾಗ್ ಘಟನೆ ಆತನ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮ ಬೀರಿತ್ತು. ಆದ್ದರಿಂದ ಅವನ ಸಹೋದರಿ ರಾತ್ರಿ ಎಂದಿನಂತೆ ಊಟಕ್ಕೆಬ್ಬಿಸಿದಾಗ ಅವನು ಒಲ್ಲೆನೆಂದು ಮುಖ ತಿರುಗಿಸಿದ.

**10. ಭಗತ್ ಸಿಂಗ್ ಮತ್ತು ಆತನ ಸಹಚರರಿಗೆ ಗಲ್ಲು ಶಿಕ್ಷೆಯಾಗಲು ಕಾರಣವೇನು ?**

**ಉತ್ತರ :** ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್ ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣ ದಂಡನೆಗೆ ಈಡಾದನು.

* * *

# ಪಾಠ–03 : ಉದಾತ್ತ ಚಿಂತನೆಗಳು

## I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

**1. ಕ್ರಿಯಾ ಸ್ವಾತಂತ್ರ್ಯ ಎಂದರೇನು ?**

**ಉತ್ತರ :** ಕ್ರಿಯಾ ಸ್ವಾತಂತ್ರ್ಯವೆಂದರೆ, ತಮಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಶೋಷಣೆ ಎಲ್ಲಿ ಇಲ್ಲವಾಗಿದೆಯೋ ಒಂದು ವರ್ಗವು ಇನ್ನೊಂದು ವರ್ಗವನು ತುಳಿಯುತ್ತಿಲ್ಲವೋ ಎಲ್ಲಿ ನಿರುದ್ಯೋಗ ಇಲ್ಲವೋ ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯವಿದೆ ಎಂದು ಹೇಳಬಹುದು.

**2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು ?**

**ಉತ್ತರ :** ರಾಜಕೀಯ ಸ್ವಾತಂತ್ರ್ಯವಿರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ ಸರ್ಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರಕಾರವು ಇರುವುದಾದರು ಜನರಿಗೆ ಜೀವನ ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವರು. ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ.

**3. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?**

**ಉತ್ತರ :** ಗಾಂಧೀಜಿಯವರು ಇಂಗ್ಲೆಂಡ್‌ಗೆ ಹೋಗುವವರೆಗೂ ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಅವಶ್ಯಕ ಅಂಶವಲ್ಲವೆಂದು ಭಾವಿಸಿದ್ದರು. ಅನಂತರ ದಕ್ಷಿಣ ಆಫ್ರಿಕಾ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆ ನೋಡಿ ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಆಯಿತು. ಕೆಟ್ಟ ಅಕ್ಷರದ ಬರವಣಿಗೆ ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು. ಅವರ ಉದಾಹರಣೆಯಿಂದ ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣ ಅವಶ್ಯ ಅಂಶವೆಂಬುದು ಪ್ರತಿಯೊಬ್ಬ ಯುವಕ ಯುವತಿಯರು ತಿಳಿದುಕೊಳ್ಳಲಿ ಎಂದು ಅವರು ಹೇಳಿದ್ದಾರೆ.

**4. 'ಅನ್‌ಟು ದಿಸ್ ಲಾಸ್ಟ್ ' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?**

**ಉತ್ತರ:** 'ಅನ್ ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿಯವರ ಮನಸ್ಸನ್ನು ಸೆರೆ ಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ನನ್ನ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ನಿರ್ಣಯಿಸಿಕೊಂಡೆ.

ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು 'ಅನ್‌ಟು ದಿಸ್ ಲಾಸ್ಟ್' ಪುಸ್ತಕ. ಅದನ್ನು ಅವರು ಸರ್ವೋದಯ ಎಂಬ ಹೆಸರಿನಲ್ಲಿ ಗುಜರಾತಿ ಭಾಷೆಗೆ ಅನುವಾದ ಕೂಡ ಮಾಡಿದರು. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮಜೀವಿಯ ಜೀವನ ಉಳುವವನ ಅಥವಾ ಕೈ ಕಸಬುಗಾರನ ಜೀವನವೇ ಯೋಗ್ಯ ಜೀವನ ಎಂದು 'ಅನ್ ಟು ದಿಸ್ ಲಾಸ್ಟ್' ಗ್ರಂಥದ ಸಿದ್ಧಾಂತಗಳನ್ನು ಅವರು ಅರಿತರು.

5. **ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?**

**ಉತ್ತರ:** ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಆದರೆ ಅವರಿಗೆ ಮತ್ತೊಂದು ಅವಶ್ಯಕತೆ ಇದೆ. ಅವರಿಗೆ ಅದನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿನ ಜ್ಞಾನರಾಶಿಯನ್ನೆ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯನ್ನು ಹೊಂದಿರುವ ಜನರಿಂದ ದೇಶದ ಪ್ರಗತಿ ಸಾಧ್ಯ.

6. **ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ ?**

**ಉತ್ತರ:** ನಿಮ್ಮ ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಿಗೊಳಿಸಿರಿ. ಅನಂತರ ನಾವು ಎಷ್ಟೇ ತೃಪ್ತಿಯಾದರೂ ಇರುತ್ತದೆ ಎಂದು ವಿವೇಕಾನಂದರೂ ಅಭಿಪ್ರಾಯ ಪಟ್ಟಿದ್ದಾರೆ.

* * *

# ಪಾಠ–04 : ವಚನಗಳು

ಕವಯತ್ರಿ ಪರಿಚಯ:

ಅಕ್ಕಮಹಾದೇವಿಯ ಕಾಲ 1160 ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡು ತಡಿ ಗ್ರಾಮದಲ್ಲಿ ಜನಿಸಿದ ಶಿವಶರಣೆ. ಕೃತಿಗಳು ಯೋಗಾಂಗ ತ್ರಿವಿಧಿ, ಸೃಷ್ಟಿವಚನ ಮತ್ತು ಮಂತ್ರಗೋಪ್ಯ ಅಂಕಿತನಾಮ ಚನ್ನಮಲ್ಲಿಕಾರ್ಜುನ

**I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**1. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?**

**ಉತ್ತರ :** ಚೆನ್ನಮಲ್ಲಿಕಾರ್ಜುನ ದೇವ

**2. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು ?**

**ಉತ್ತರ :** ಅಕ್ಕ ಮಹಾದೇವಿ ಶಿವಶರಣೆ ಹೇಳುವಂತೆ ಅರಿಯದವರೊಡನೆ ಸಂಗವ ಮಾಡಿದಡೆ ಕಲ್ಲಹೊಯ್ದು ಕಿಡಿಯ ತೆಗೆದುಕೊಬಂತೆ ಎಂದು ಹೇಳಿದ್ದಾರೆ.

**3. ಅಕ್ಕಮಹಾದೇವಿ ಯಾವುದನ್ನು ಹಾನಿ ಎಂದಿದ್ದಾಳೆ ?**

ಉತ್ತರ : ಹಿಂದೆ ಮಾಡಿದ ಪಾಪಗಳನ್ನೆಲ್ಲ ಮುಂದಿನ ದಿನಗಳಲ್ಲಿ ಮಾಡಿದರೂ ಹಾನಿ ಎಂದು ಅಕ್ಕಮಹಾದೇವಿ.

# ಪಾಠ–05 : ನಾನು ಪ್ರಾಸ ಬಿಟ್ಟ ಕತೆ

**I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**1. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು ?**

**ಉತ್ತರ :** ಪೈಗಳ ತಮ್ಮನ ನೂಲು ಮದುವೆಯ ದಿನ ಚಪ್ಪರ ಹಾಕಿದ್ದರು. ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು. ಮತ್ತೊಂದು ಕಡೆ ಮಂಡಿಗೆಗಳನ್ನು ಮಡಚುತ್ತಿದ್ದರು. ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ.

**2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**

**ಉತ್ತರ :** ಚಪ್ಪರದ ಗದ್ದಲ ಮಧ್ಯೆ ಕುಗ್ಗಿದ ಕೊರಳಲ್ಲಿ ಹಾಡು ಕೇಳಿಸಿಕೊಂಡ ಪೈಗಳಿಗೆ ಏನಾಯಿತೋ ಏನು ತೋಚಿತೊ ದೇವರೇ ಬಲ್ಲ. ಮತ್ತೆ ಚಪ್ಪರದ ಗವುಜು ಅವರಿಗೆ ಕೇಳಿಸಲಿಲ್ಲ. ನೆಟ್ಟಗೆ ಹೋದವರು ಅಭ್ಯಾಸದ ಪುಸ್ತಕವನ್ನು ಹಿಡಿದರು, ಬರೆಯತೊಡಗಿದರು. ಏಕಾಂಕ ನಾಟಕ ಎನ್ನಬಹುದಾದ ನಾಟಕವನ್ನು ಇಳಿ ಹೊತ್ತಿನೊಳಗೆ ಬರೆದು ಮುಗಿಸಿದರು.

**3. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು ?**

**ಉತ್ತರ :** ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರು ಮಕರಾಷನ ಕಾಳಗ.

**4. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು ?**

**ಉತ್ತರ :** ಮಂಗಳೂರಿನ ಬಾಸೆಲ್ ಮಿಶನ್ ರವರು ಶಬ್ದಮಣಿ ದರ್ಪಣದಿಂದಲೂ, ಛಂಧೋಂಬುಧಿಯಿಂದಲೂ 1889ರಲ್ಲಿ ಪ್ರಕಟಿಸಿದ ಹಳಗನ್ನಡ ವ್ಯಾಕರಣ ಸೂತ್ರಗಳು ಎಂಬ ಪುಸ್ತಕವನ್ನು, ಅದರಲ್ಲಿ ಮುಖ್ಯತಃ ಛಂದೋ ಲಕ್ಷಣ ಪ್ರಕರಣವನ್ನು, ಕನ್ನಡ ಜೈಮಿನಿ ಭಾರತ, ಗದುಗಿನ ಭಾರತ, ಶಬರ ಶಂಕರವಿಲಾಸವೇ, ಮೊದಲಾದ ಮಹಾಕಾವ್ಯಗಳನ್ನು ಲೇಖಕರು ಓದಿದರು.

**5. "ಬಿಲ್ಲಹಬ್ಬ " ವನ್ನು ರಚಿಸಿದ ಕವಿ ಯಾರು ?**

**ಉತ್ತರ:** "ಬಿಲ್ಲಹಬ್ಬ"ವನ್ನು ರಚಿಸಿದವರು ತುಳುನಾಡಿನ ಸರ್ವಶ್ರೇಷ್ಠ ಯಕ್ಷಗಾನ ಕವಿಯಾದ ಮೂಲ್ಕಿಯ ವಾಸುದೇವ ಪ್ರಭುರವರು.

**6. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು ?**

**ಉತ್ತರ:** ಲೇಖಕರು 1899ರಲ್ಲಿ ಶೇಕಸ್ಪಿಯರ್ "ಟ್ವೆಲ್ತ್‌ನೈಟ್" ಎಂಬ ನಾಟಕದ ಮೊದಲನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ-ಕಂದಗಳಲ್ಲಿ ಭಾಷಾಂತರಗೊಳಿಸಿ, ಅವನ್ನು ಶ್ರೀನಂದಳಿಕೆ ಲಕ್ಷ್ಮೀ ನಾರಾಣಪ್ಪನವರಿಗೆ ಕಳಿಸಿ ಕೊಟ್ಟಾಗ ಅವರು ಮುಂದುವರಿಸಿ ಎಂದು ಹೇಳಿ ಕಳುಹಿಸಿದರು.

**7. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು ?**

**ಉತ್ತರ:** ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಲೇಖಕರು ರವೀಂದ್ರನಾಥ ಠಾಕೂರರ ಅಯಿ ಭುವನ ಮನೋ ಮೋಹಿನಿ ಎಂದು ಮೊದಲಾಗುವ "ಭಾರತಲಕ್ಷ್ಮೀ" ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದರು. ರವೀಂದ್ರನಾಥ ಠಾಕೂರರ ಶಿಶು ಎಂಬ ಗ್ರಂಥದಲ್ಲಿಯ ವಿದಾಯ ಎಂಬ ಕವಿತೆಯನ್ನು, ಶೇಖ್ ಮುಹಮ್ಮದ್ ಇಕ್ಬಾಲರ ಹಿಂದೂಸ್ತಾನ ಹಮಾರಾ ಎಂಬ ಉರ್ದು ಗೀತವನ್ನು ಕನ್ನಡಿಸಿದರು.

***

# ಪಾಠ–06 : ಶುಕನಾಸನ ಉಪದೇಶ

**ಲೇಖಕರ ಪರಿಚಯ:**

ಡಾ. ಬನ್ನಂಜೆ ಗೋವಿಂದಾ ಚಾರ್ಯ ಇವರು ಉಡುಪಿ ಜಿಲ್ಲೆಯಲ್ಲಿ 1936 ಅಗಸ್ಟ್ 3 ರಂದು ಜನಿಸಿದರು. ಕೃತಿಗಳು ಭಗವಂತನ ನಲ್ನುಡಿ, ಭಾಣಭಟ್ಟನ ಕಾದಂಬರಿ, ಮುಗಿಲ ಮಾತು, ಹೇಳದೆ ಉಳಿದದ್ದು, ನೆನಪಾದಳು ಶಕುಂತಲೆ, ಮತ್ತೆ ರಾಮನ ಕತೆ, ಮಹಾಶ್ವೇತೆ ಆವೆಯ ಮಣ್ಣಿನ ಆಟದ ಬಂಡಿ ಋತಗಳ ಹೆಣಿಗೆ, ಪ್ರಶಸ್ತಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ,

ಆಯ್ಕೆ ಗ್ರಂಥ: ಕಾದಂಬರಿ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

**1. ಯಾರಿಗೆ ಗುರುವಾಣಿ ಹೊರೆಯೆನಿಸುತ್ತದೆ?**

**ಉತ್ತರ :** ಮೂರ್ಖರ ಕಿವಿಗೆ ಹೊರೆಯೆನಿಸುತ್ತದೆ

**2. ಯಾರ ಕಿವಿಗೆ ಉಪದೇಶ ನಾಟುವುದಿಲ್ಲಾ?**

**ಉತ್ತರ :** ರಾಜರ ಮನೆಯಲ್ಲಿ ಹುಟ್ಟಿದರೆ ಸಾಕು ಅಹಂಕಾರದಿಂದ ಉಪದೇಶ ನಾಟುವುದಿಲ್ಲ

**3. ದುಡ್ಡಿನ ಪತ್ಯ ಅಡರಿದವರಿಗೆ ಯಾವುದು ಕ್ಷುದ್ರವಾಗಿ ಕಾಣುತ್ತದೆ?**

**ಉತ್ತರ :** ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ.

# ವ್ಯಾಕರಣ ಭಾಗ

## ಉಪಮಾಲಂಕಾರ

**ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನ ದೊಂದಳವು?**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'

**ಉಪಮೇಯ** : ದ್ರುಪದನ ಅಳವು (ಯೋಗ್ಯತೆ / ಪರಾಕ್ರಮ )

**ಉಪಮಾನ** : ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದನೊಳ ( ನೊಣ )

**ಉಪಮಾವಾಚಕ** : ವೊಲ್

**ಸಮನ್ವಯ** : ಇಲ್ಲಿ ಉಪಮೇಯವಾಗಿರುವ ದುಪದನ ಯೋಗ್ಯತೆಯನ್ನು ಕುಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದನೊಳ (ನೊಣ)ಕ್ಕೆ ಹೋಲಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ .

## ರೂಪಕಾಲಂಕಾರ

**ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ.**

"ಮಾರಿ ಗೌತಣವಾಯ್ತು ನಾಳಿನ ಭಾರತವು"

ಆಲಂಕಾರ : ರೂಪಕಾಲಂಕಾರ

ಉಪಮೇಯ : ಭಾರತಯುದ್ಧ

ಉಪಮಾನ : ಮಾರಿಯಔತಣ

ಸಮನ್ವಯ : ಇಲ್ಲಿ ಉಪಮೇಯವಾಗಿರುವ ಭಾರತ ಯುದ್ಧಕ್ಕೂ ಉಪಮಾನವಾರಿರುವ ಮಾರಿಯ ಔತಣಕ್ಕೂ ಅಭೇದ ಕಲ್ಪಿಸಲಾಗಿದೆ. ಆದ್ದರಿಂದ ಇದು ರೂಪಕಾಲಂಕಾರವಾಗಿದೆ.

**ಕನ್ನಡಸಂಧಿಗಳು– 1. ಲೋಪಸಂಧಿ 2. ಆಗಮಸಂಧಿ 3. ಆದೇಶಸಂಧಿ.**

1. ಲೋಪಸಂಧಿ = ಊರೂರು, ಬಲ್ಲೆನೆಂದು, ಮಾತಂತು, ಸಂಪನ್ನರಾದ
2. ಆಗಮಸಂಧಿ = ಕೈಯನ್ನು, ಮಳೆಯಿಂದ, ಶಾಲೆಯಲ್ಲಿ , ಮರವನ್ನು, ಮಗುವಿಗೆ.
3. ಆದೇಶಸಂಧಿ = ಮಳೆಗಾಲ, ಮೈದೋರು, ಬೆಂಬತ್ತು, ಕಡುವೆಳ್ಪು, ಮೆಲ್ವಾತು. ತಲೆಗಡರಿ, ಹಾಲುಗಡಲುಲ.
4. ಸವರ್ಣ ದೀರ್ಘ ಸಂಧಿ = ಮಹಾತ್ಮ, ಗಿರೀಶ, ಸುರಾಸುರ, ವದೂಪೇತ, ಗುರೂಪದೇಶ, ಪಟ್ಟಾಭಿಷೇಕ.

**2. ಸಂಸ್ಕೃತ ಸಂಧಿಗಳ ಹೆಸರುಗಳನ್ನು ಸ್ವರ ಮತ್ತು ವ್ಯಂಜನ ಸಂಧಿಗಳಿಗಾಗಿ ವಿಂಗಡಿಸಿ ಬರೆಯಿರಿ.**

ಸಂಸ್ಕೃತ ಸ್ವರ ಸಂಧಿಗಳು : 1. ಸವರ್ಣದೀರ್ಘಸಂಧಿ 2. ಗುಣಸಂಧಿ 3. ವೃದ್ಧಿಸಂಧಿ 4. ಯಣ್ಸಂಧಿ

ಸಂಸ್ಕೃತ ವ್ಯಂಜನ ಸಂಧಿಗಳು : 1. ಜಸ್ತ್ವಸಂಧಿ 2. ಶ್ಚುತ್ವಸಂಧಿ 3. ಅನುನಾಸಿಕ ಸಂಧಿ

**3. ಕೊಟ್ಟಿರುವ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.**

ಸುರಾಸುರ, ಬಲ್ಲೆನೆಂದು, ಸೂರ್ಯೋದಯ, ಮಳೆಗಾಲ, ಅಷ್ಟೈಶ್ವರ್ಯ, ವೇದಿಯಲ್ಲಿ.

ಸುರ +ಅಸುರ =ಸುರಾಸುರ – ಸವರ್ಣದೀರ್ಘಸಂಧಿ

ಬಲ್ಲೆನು + ಎಂದು = ಬಲ್ಲೆನೆಂದು–ಲೋಪಸಂಧಿ

ಸೂರ್ಯ + ಉದಯ = ಸೂರ್ಯೋದಯ–ಗುಣಸಂಧಿ

ಮಳೆ + ಕಾಲ = ಮಳೆಗಾಲ–ಆದೇಶಸಂಧಿ

ಅಷ್ಟ+ ಐಶ್ವರ್ಯ = ಅಷ್ಟೈಶ್ವರ್ಯ–ವೃದ್ಧಿಸಂಧಿ

ವೇದಿ + ಅಲ್ಲಿ = ವೇದಿಯಲ್ಲಿ – ಆಗಮಸಂಧಿ

**ಆ) ಮೊದಲೆರಡು ಪದಗಳಿಗಿರುವ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸರಿಯಾದ ನಾಲ್ಕನೆಯ ಪದ ಬರೆಯಿರಿ.**

| | | | | | | | |
|---|---|---|---|---|---|---|---|
| 1. | ನಮೋನಮೋ | : | ದ್ವಿರುಕ್ತಿ | : : | ಧೀರಶೂರ | : | ಜೋಡುನುಡಿ |
| 2. | ಲೋಪಸಂಧಿ | : | ಸ್ವರಸಂಧಿ | : : | ಆದೇಶಸಂಧಿ | : | ವ್ಯಂಜನಸಂಧಿ |
| 3. | ಕಟ್ಟಕಡೆಗೆ | : | ಕಡೆಗೆಕಡೆಗೆ | : : | ಮೊತ್ತಮೊದಲು | : | ಮೊದಲುಮೊದಲು |
| 4. | ಶರಚ್ಚಂದ್ರ | : | ಶ್ಚುತ್ವಸಂಧಿ | : : | ದಿಗಂತ | : | ಜಸ್ತ್ವಸಂಧಿ |

**ಒಮ್ಮೊಮ್ಮೆ, ಜಾಗವನ್ನು, ಅತ್ಯಾದರ, ವಾಚನಾಲಯ, ಸಂಗ್ರಹಾಲಯ, ಓಣಿಯಲ್ಲಿ**

| | | | | |
|---|---|---|---|---|
| ಒಮ್ಮೆ + ಒಮ್ಮೆ | = | ಒಮ್ಮೊಮ್ಮೆ | – | ಲೋಪಸಂಧಿ |
| ಜಾಗ + ಅನ್ನು | = | ಜಾಗವನ್ನು | – | ಆಗಮಸಂಧಿ |
| ಅತಿ + ಆದರ | = | ಅತ್ಯಾದರ | – | ಯಣ್ಸಂಧಿ |
| ವಾಚನ + ಆಲಯ | = | ವಾವಚನಾಲಯ | – | ಸವರ್ಣದೀರ್ಘ ಸಂಧಿ |
| ಸಂಗ್ರಹ + ಆಲಯ | = | ಸಂಗ್ರಹಾಲಯ | – | ಸವರ್ಣದೀರ್ಘ ಸಂಧಿ |
| ಓಣಿ +ಅಲ್ಲಿ | = | ಓಣಿಯಲ್ಲಿ | – | ಆಗಮಸಂಧಿ |

**ತತ್ಸವ – ತದ್ಭವ ಪದಗಳು**

ಚೀರ>ಸೀರೆ, ತವಸಿ>ತಪಸ್ವಿ, ದಿಟ್ಟಿ>ದೃಷ್ಟಿ, ಸಂದೆಯ> ಸಂದೇಹ, ಕೋಕಿಲಾ > ಕೋಗಿಲೆ, ವ್ಯಯ > ಬೀಯ, ವ್ಯಾಪಾರಿ > ಬೇಹಾರಿ, ಪ್ರಸಾದ > ಹಸಾದ, ವಂದ್ಯಾ > ಬಂಜೆ, ಪ್ರತೀಹಾರಿ > ಪಡೆಯರ, ಬಣ್ಣ> ವರ್ಣ, ಬ್ರಹ್ಮ> ಬೊಮ್ಮ, ಯುಗ>ಜುಗ, ಚಂದ್ರ> ಚಂದಿರ, ಅಂಗಳ> ಅಂಕಣ, ಸನಿಯ> ಸಮೀಪ, ದ್ಯೂತ> ಜೂಜು, ವಂಧ್ಯಾ> ಬಂಜೆ, ವಿದ್ಯಾಧರ>ಬಿಜ್ಜೋದರ, ವೈಶಾಖ> ಬೇಸಗೆ, ಕುಠಾರ > ಕೊಡಲಿ, ಪಾದುಕಾ> ಹಾವುಗೆ, ಅರ್ಕ > ಎಕ್ಕ,

೩. ಪ್ರಸ್ತಾರ ಹಾಕಿ, ಗಣವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ.

ಏನು । ಹೇಳ್ಲೈ । ಕರ್ಣ । ಚಿತ್ತ ।

ಗ್ಲಾನಿ । ಯಾವುದು । ಮನಕೆ । ಕುಂತೀ ।

ಸೂನು । ಗಳಬೆಸ । ಕೈಸಿ । ಕೊಂಬುದು । ಸೇರ । ದೇನಿನ । ಗೆ

ಛಂದಸ್ಸು – ಭಾಮಿನಿಷಟ್ಪದಿ

೪. ಪ್ರಸ್ತಾರಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.

೫ ೫ ೫ ೫

ಉರ್ವಿಯೊಳ್ । ಕೌಸಲ್ಯೆ । ಪಡೆದಕುವ । ರಂರಾಮ।

ನೊರ್ವನೇ । ವೀರನಾ । ತನಯಜ್ಞ । ತುರಗಮಿದು।

ನಿರ್ವಹಿಸ । ಲಾರ್ಪರಾ । ರಾದೊಡಂ । ತಡೆಯಲೆಂ । ದಿರ್ದಲೇ । ಖನವನೋ ।ದಿ

ಛಂದಸ್ಸು : ವಾರ್ಧಕ ಷಟ್ಪದಿ

ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.

೪ ೪ ೪ =೧೨

ಅಂತೆಂ | ಬಸಾರ್ಗೆ | ಪಿರಿದುಂ|

೪ ೪ ೪ ೪ ೪ =೨೦

ಭ್ರಾಂತುಡಿ | ಲೇಂದ್ರೋ । ಣಸೆಂಬ | ನೇಂಪಾ |ರ್ವನೆಪೇ।|

ಛಂದಸ್ಸು–**ಕಂದಪದ್ಯ**

ನ ಜ ಭ ಜ ಜ ಜ ರ

ಪಿಳಿಸೊ | ಳವಿಂಗೆ | ಕುಪ್ಪೆವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ

ಛಂದಸ್ಸು– **ಚಂಪಕಮಾಲಾವೃತ್ತ**

# ವ್ಯವಹಾರಿಕ/ ಮನವಿ ಪತ್ರಕ್ಕೆ ಸಂಬಂಧಿಸಿದಂತೆ ಅಂಕ ವಿತರಣೆ

ಇಂದ, ಗೆ, ಸಂಬೋಧನೆ, ವಿಷಯ–01

ಪತ್ರದ ಒಡಲು, ವಿಷಯ ನಿರೂಪಣೆ,–02

ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ,–01

ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ,–01

ಒಟ್ಟು ಅಂಕ–05

ಮಾದರಿ ವ್ಯಾವಹಾರಿಕ ಪತ್ರ

**ಪರಿಷತ್ತು ಪ್ರಕಟಿಸಿದ–ಕನ್ನಡ ನಿಘಂಟುವಿನ ಹತ್ತು ಪ್ರತಿಗಳನ್ನು ಕಳುಹಿಸಿ ಕೊಡುವಂತೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಪತ್ರ ವ್ಯವಹಾರ ನಡೆಸಿ.**

ಇವರಿಂದ–

ಪ್ರಮೀಳ, ದಿನಾಂಕ :28/04/2024

ಹತ್ತನೆಯ ತರಗತಿ ಸ್ಥಳ : ಶಿವಮೊಗ್ಗ

ಸರಕಾರಿ ಪ್ರೌಢಶಾಲೆ

ಅಶೋಕನಗರ, ಶಿವಮೊಗ್ಗ

ಇವರಿಗೆ,
ಮಾನ್ಯ ಕಾರ್ಯದರ್ಶಿಗಳು,
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು.

ಮಾನ್ಯರೇ,

**ವಿಷಯ: ಪರಿಷತ್ತಿನ ಪ್ರಕಟನೆಯಾದ–ಕನ್ನಡ ನಿಘಂಟು ವಿನ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವ ಬಗ್ಗೆ.**

ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಹತ್ತು ಪ್ರತಿಗಳನ್ನು ನನಗೆ ಮತ್ತು ನನ್ನ ಗೆಳತಿಯರಿಗೆ ಬೇಕಾಗಿದೆ ದಯಮಾಡಿ ಹತ್ತು ಪ್ರತಿಗಳನ್ನು ನನ್ನ ವಿಳಾಸಕ್ಕೆ ವಿ.ಪಿ.ಪಿ. ಮಾಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.ಆ ಬಗ್ಗೆ ಐನೂರು ರೂಪಾಯಿಗಳ ಬ್ಯಾಂಕ ಹುಂಡಿಯನ್ನು ಮುಂಗಡ ರೂಪವಾಗಿ ಈ ಪತ್ರದ ಜೊತೆ ಇರಿಸಿದ್ದೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ನಂಬುಗೆಯ

ಸಹಿ.........................

ಪ್ರಮೀಳ

ಗಾದೆ ಮಾತು

ಗಾದೆಗಳ ಅಂಕ ವಿತರಣೆ

ಮಹತ್ವದ ವಿವರಣೆ ಗಾದೆಯ – 1

ಉದಾಹರಣೆಯೊಂದಿಗೆ ಅರ್ಥ ವಿವರಣೆ – 1

ಭಾಷಾಶೈಲಿಗೆ – 1

## ಗಾದೆ ಮಾತು

**ಮನಸ್ಸಿದ್ದರೆ ಮಾರ್ಗ :** 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ದೂರದಿಂದ ಒಂದು ಬೆಟ್ಟವನ್ನು ನೋಡಿದರೆ ಅದು ಅಂದವಾಗಿ ಕಾಣಿಸುತ್ತದೆ. ಕಣ್ಣಿಗೆ ಕಾಣುವ ವಸ್ತುಗಳು ದೂರದಲ್ಲಿದ್ದರೆ ಅದು ಎಷ್ಟು ಸುಂದರವಾಗಿದೆ ಎಂದೆನಿಸುತ್ತದೆ. ಆದರೆ ಹತ್ತಿರ ಹೋದಾಗಲೇ ಅದರಲ್ಲಿ ಎಷ್ಟು ಕಲ್ಲು – ಮುಳ್ಳುಗಳು, ಸಣ್ಣ ಸಣ್ಣ ಗಿಡಗಳು ಇಲ್ಲವೇನೋ ಎಂದೆನಿಸುವುದು. ಮೇಲ್ನೋಟಕ್ಕೆ ತುಂಬಿ ಅಂದವೇ ಯಾವುದನ್ನೂ ನಂಬಬಾರದು. ಅಂದರೆ ಈ ಗಾದೆಯ ಒಳ ಮರ್ಮವೇನೆಂದರೆ, ಕೆಲವರು ನೋಡಲು ಒಳ್ಳೆಯವರ ಹಾಗೆ ಕಾಣಿಸುತ್ತಾರೆ. ಆದರೆ ಹೃದಯದಲ್ಲಿ ವಿಷ ತುಂಬಿಕೊಂಡು ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಆದುದರಿಂದ ಇಲ್ಲಿ ಎಚ್ಚರಿಕೆ ಬಹಳ ಮುಖ್ಯ. ವಿಶೇಷವಾಗಿ ಹುಳುಕುಗಳು ಕಣ್ಣಿಗೆ ಕಾಣುವುದು ಸುಂದರವಾಗಿರಬಹುದು ಆದರೆ, ಅವುಗಳನ್ನು ಅದರಲ್ಲಿರುವ ಗಮನಿಸಿದಾಗಲೇ ಕಂಡುಬರುವುದು. ದೂರದ ಬೆಟ್ಟ ನುಣ್ಣಗೆ, ಸುಂದರವಾಗಿ ಕಾಣಿಸುತ್ತದೆ. ಅದರ ಹತ್ತಿರ ಹೋದಾಗಲೇ ಅದರಲ್ಲಿ ಬರೀ ಕಲ್ಲು, ಮುಳ್ಳು ಹುಳು ಹುಪ್ಪಟೆಗಳಿಂದ ತುಂಬಿಕೊಂಡಿರುತ್ತದೆ, ಎಲ್ಲವೂ ಗೊಂದಲದಂತೆ ಕಾಣುತ್ತದೆ ಎಂದು ಅರಿವಾಗುವುದು. ಕಾಣದ ವಸ್ತುವಿಗೆ ಸಾಮಾನ್ಯವಾಗಿ ಆಸಕ್ತಿ–ಆಕಾಂಕ್ಷೆಗಳು ಹೆಚ್ಚಾಗಿ ಉಂಟಾಗುವುದು ಸಹಜ.

ಆಗತಾನೆ ಪರಿಚಯವಾದ ಸ್ನೇಹಿತರು ಹೆಚ್ಚು ಪ್ರೀತಿಯನ್ನು ತೋರಿಸುತ್ತಾರೆ, ಅತ್ಯಂತ ಆಪ್ತರಂತೆ ವರ್ತಿಸುತ್ತಾರೆ. ಅರ್ಥಸಹಿತ ಗಾದೆಗಳು 26. ಮನಸ್ಸಿದ್ದರೆ ಮಾರ್ಗ ಯಾವುದೇ ಕೆಲಸ ಮಾಡಬೇಕಾದರೆ ಆಸಕ್ತಿ ಇರಬೇಕು. ಮಾಡಬೇಕೆಂಬ ಹಂಬಲ ಹಾಗೂ ಮನಸ್ಸಿರಬೇಕು. ಕೆಲಸವನ್ನು ಮಾಡಿಯೇ ಮುಗಿಸಬೇಕು ಮನಸ್ಸು ಇರಬೇಕು. ಮನಸ್ಸಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದು ಈ ಗಾದೆಯ ಸಾಮಾನ್ಯ ಅರ್ಥ.

## ಗ್ರಂಥಾಲಯ ಮಹತ್ವ ಪ್ರಬಂಧ

**ಪ್ರಬಂಧ ಪೀಠಿಕೆ :** ಗ್ರಂಥಾಲಯವು ಶಿಕ್ಷಣ ವ್ಯವಸ್ಥೆಯ ಹೃದಯ ಮತ್ತು ಆತ್ಮವಾಗಿದೆ. ಗ್ರಂಥಾಲಯವು ಜ್ಞಾನವನ್ನು ಹರಡುತ್ತದೆ ಮತ್ತು ಅನೇಕ ಉಪಯೋಗಗಳನ್ನು ಹೊಂದಿದೆ.

**ಗ್ರಂಥಾಲಯ ಮಹತ್ವ ಪ್ರಬಂಧ ವಿಷಯ ವಿವರಣೆ**

ವಿವಿಧ ರೀತಿಯ ಪುಸ್ತಕಗಳಿರುವ ಸ್ಥಳ ಮತ್ತು ಗ್ರಂಥಾಲಯದಲ್ಲಿ ಸ್ವತಂತ್ರವಾಗಿ ಅಧ್ಯಯನ ಮಾಡಬಹುದಾಗಿದೆ. ಅದರ ಬಳಕೆಯ ಆಧಾರದ ಮೇಲೆ ಗ್ರಂಥಾಲಯದಲ್ಲಿ ಹಲವು ವರ್ಗಗಳಿವೆ. ಕೆಲವು ಗ್ರಂಥಾಲಯಗಳು ಖಾಸಗಿಯಾಗಿದ್ದರೆ, ಕೆಲವು ಸಾರ್ವಜನಿಕವಾಗಿದ್ದರೆ ಕೆಲವು ಸರ್ಕಾರಿ ಗ್ರಂಥಾಲಯಗಳಾಗಿವೆ. ಬಡವರು, ವಿಶೇಷವಾಗಿ ಪುಸ್ತಕ ಖರೀದಿಸಲು ಸಾಧ್ಯವಾಗದ ಬಡ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಉತ್ತಮವಾಗಿ ಬಳಸಿಕೊಳ್ಳಬಹುದು. ಅವರು ಜ್ಞಾನವನ್ನು ಪಡೆಯಲು ಗ್ರಂಥಾಲಯದಿಂದ ಪುಸ್ತಕಗಳನ್ನು ಎರವಲು ಪಡೆಯಬಹುದು.

ಶಾಲೆ ಮತ್ತು ಗ್ರಂಥಾಲಯಗಳು ಸರಸ್ವತಿ ದೇವಿಯ ಆರಾಧನೆಯ ಎರಡು ದೇವಾಲಯಗಳಾಗಿವೆ. ನಿಗೂಢ ಜ್ಞಾನವನ್ನು ಒದಗಿಸುವಲ್ಲಿ ಗ್ರಂಥಾಲಯಗಳು ಪ್ರಮುಖ ಪಾತ್ರವಹಿಸುತ್ತವೆ. ಅದು ನಮ್ಮನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆಗೆ

ಕೊಂಡೊಯ್ಯುತ್ತದೆ. ಮಾನವರು ತಮ್ಮ ದೈಹಿಕ ಶಕ್ತಿಗಾಗಿ ಮಧ್ಯಮ ಮತ್ತು ಸಮತೋಲಿತ ಆಹಾರದ ಅಗತ್ಯವಿರುವಂತೆ, ಮಾನಸಿಕ ಶಕ್ತಿಗೆ ಕಲಿಕೆಯು ಅತ್ಯಗತ್ಯವಾಗಿದೆ. ಗ್ರಂಥಾಲಯಗಳೊಂದಿಗೆ ಸಂಪರ್ಕದಲ್ಲಿರುವುದರಿಂದ ಕಾಮ ಮತ್ತು ಪ್ರಲೋಭನೆಯಿಂದ ಮಾನವನಿಗೆ ಸಹಾಯವಾಗುತ್ತದೆ.

ಗ್ರಂಥಾಲಯ ಮಹತ್ವ ಪ್ರಬಂಧ ಇದಲ್ಲದೆ, ಗ್ರಂಥಾಲಯಗಳು ಇತರ ಯಾವುದೇ ಮಾಧ್ಯಮಗಳಿಗಿಂತ ಜ್ಞಾನವನ್ನು ಹಂಚಿಕೊಳ್ಳುವ ಪ್ರಮುಖ ಸಾಧನಗಳಾಗಿವೆ. ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರಂತಹ ಮಹಾನ್ ಚಿಂತಕರು ತಮ್ಮದೇ ಆದ ಗ್ರಂಥಾಲಯಗಳನ್ನು ಸ್ಥಾಪಿಸಿದ್ದರು. ಗ್ರಂಥಾಲಯಗಳು ತುಂಬಾ ಅದ್ಭುತವಾಗಿವೆ! ಗ್ರಂಥಾಲಯಗಳ ಬಳಕೆಯು ತರಗತಿಯ ಅನುಭವವನ್ನು ಹೆಚ್ಚಿಸಲು ಸಹಾಯ ಮಾಡುವುದರಿಂದ ಗ್ರಂಥಾಲಯಗಳ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ತಮ ಓದುವ ಮತ್ತು ಅಧ್ಯಯನದ ಹವ್ಯಾಸಗಳನ್ನು ಸ್ಥಾಪಿಸಬಹುದು.

ಗ್ರಂಥಾಲಯವನ್ನು ಕೆಲವು ಸಂಶೋಧನೆಗಳಿಗೆ ಅಥವಾ ಸಾರ್ವಜನಿಕ ಸಮಸ್ಯೆಗಳಿಗೆ ಆಗಾಗ್ಗೆ ಬಳಸಲಾಗುತ್ತದೆ. ಪ್ರಗತಿಪರ ಜ್ಞಾನದ ಉದ್ದೇಶಗಳನ್ನು ಕಲಿಯಲು ಮತ್ತು ಪಡೆದುಕೊಳ್ಳಲು ಗ್ರಂಥಾಲಯಗಳು ಅತ್ಯಗತ್ಯ. ಗ್ರಂಥಾಲಯಗಳು ಜವಾಬ್ದಾರಿಗಳ ಅರ್ಥವನ್ನು ಕಲಿಯಲು ಸಹ ಸಹಾಯ ಮಾಡುತ್ತದೆ. ಇತಿಹಾಸದ ಪುಸ್ತಕಗಳಿಂದ ಒಮ್ಮೆ ಕಲಿತರೆ ಹಿಂದೆ ಮಾಡಿದ ತಪ್ಪುಗಳನ್ನು ಭವಿಷ್ಯದಲ್ಲಿ ತಪ್ಪಿಸಬಹುದು.

**ಗ್ರಂಥಾಲಯಗಳ ಉಪಯೋಗಗಳು**

ಇಂಟರ್ನೆಟ್ ಕೆಲವೊಮ್ಮೆ ಅರಿತುಕೊಳ್ಳಲು ಸಾಧ್ಯವಾಗದ ಅನೇಕ ತಪ್ಪುಗಳನ್ನು ಹೊಂದಿರಬಹುದು. ಇಂಟರ್ನೆಟ್ ಗ್ರಂಥಾಲಯಗಳನ್ನು ಅನುಸರಿಸುತ್ತದೆ ಆದರೆ ಅದನ್ನು ಬದಲಿಸಲು ವಿಫಲವಾಗಿದೆ.

ಮಗುವು ತನ್ನ ಹೆತ್ತವರಿಂದ ಪಡೆಯುವ ಶ್ರೇಷ್ಠ ಉಡುಗೊರೆ ಪುಸ್ತಕವಾಗಿದೆ ಎಂದು ಉಲ್ಲೇಖಿಸಲಾಗಿದೆ. ಈ 21ನೇ ಶತಮಾನದಲ್ಲಿ ಟೆಲಿವಿಷನ್, ಕಂಪ್ಯೂಟರ್, ಇಂಟರ್‌ನೆಟ್ ಯುಗದಲ್ಲಿ ಜನರು ಗ್ರಂಥಾಲಯದ ಸತ್ವವನ್ನು ಮರೆಯಲಾರಂಭಿಸಿದ್ದಾರೆ.

## ವಿಭಕ್ತಿ ಪ್ರತ್ಯಯ

| ವಿಭಕ್ತಿ | ಕಾರಕ | ಪ್ರತ್ಯಯ | ಕನ್ನಡ – ಹಳೆಕನ್ನಡ |
|---|---|---|---|
| ಪ್ರಥಮ | ಕರ್ತೃ | ಉ | ಮ್ |
| ದ್ವಿತೀಯಾ | ಕರ್ಮ | ಅನ್ನು | ಅಮ್ |
| ತೃತೀಯಾ | ಕರಣ | ಇಂದ | ಇಮ್ |
| ಚತುರ್ಥೀ | ಸಂಪ್ರದಾನ | ಗೆ,ಇಗೆ.ಕ್ಕೆ. | ಕೆ |
| ಪಂಚಮೀ | ಅಪದಾನ | ದೆಸೆಯಿಂದ | ಅತ್ತಣಿಂ |
| ಷಷ್ಠೀ | ಸಂಬಂಧ | ಅ | ಅ |
| ಸಪ್ತಮೀ | ಅಧಿಕರಣ | ಅಲ್ಲಿ | ಒಳ್ |

## ಲೇಖನ ಚಿಹ್ನೆಗಳು

1) ಪೂರ್ಣ ವಿರಾಮ . 2) ಅರ್ಧ ವಿರಾಮ ; 3) ಅಲ್ಪ ವಿರಾಮ, 4) ಪ್ರಶ್ನಾರ್ಥಕ ?

5) ಭಾವಸೂಚಕ ! 6) ಉದ್ಧರಣ ಚಿಹ್ನೆ " " 7) ವಾಕ್ಯವೇಷ್ಠನ ಚಿಹ್ನೆ ' '

8) ಆವರಣ ಚಿಹ್ನೆ ( ) 9) ವಿವರಣಾತ್ಮಕ ಚಿಹ್ನೆ :

# A

# CCE RF/PF/
# NSR & NSPR

## Revised Full Syllabus

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1**

**MARCH/APRIL 2024 EXAMINATION - 1**

**ಮಾದರಿ ಉತ್ತರಗಳು**

**MODEL ANSWERS**

**ಸಂಕೇತ ಸಂಖ್ಯೆ : 01-K** **CODE NO. : 01-K**

## ವಿಷಯ ಪ್ರಥಮ ಭಾಷೆ — ಕನ್ನಡ

## Subject : First Language — KANNADA

**ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.**

**Regular Fresh / Private Fresh / NSR / NSPR**

**ದಿನಾಂಕ 25. 03. 2024 ]** **[ ಗರಿಷ್ಠ ಅಂಕಗಳು : 100**

**Date : 25. 03. 2024 ]** **[ Max. Marks : 100**

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ ([redacted]ಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)** | **6 × 1 = 6** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ<br>(ಎ) ೦೫ (ಬಿ) ೦೭<br>(ಸಿ) ೧೩ (ಡಿ) ೧೦<br>**ಉತ್ತರ** (ಡಿ) ೧೦ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ವಾಗ್ದೇವಿ ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>ಎ ಆದೇಶ ಸಂಧಿ ಬಿ ಜಶ್ತ್ವಸಂಧಿ<br>ಸಿ ಶ್ಚುತ್ವಸಂಧಿ ಡಿ ಅನುನಾಸಿಕ ಸಂಧಿ<br>**ಉತ್ತರ** ಬಿ ಜಶ್ತ್ವಸಂಧಿ | |
| 3. | ತೃತೀಯಾ ವಿಭಕ್ತಿಯ ಕಾರಕಾರ್ಥ<br>ಎ ಕರಣಾರ್ಥ ಬಿ ಕರ್ಮಾರ್ಥ<br>ಸಿ ಸಂಪ್ರದಾನ ಡಿ ಸಂಬಂಧ<br>**ಉತ್ತರ** ಎ ಕರಣಾರ್ಥ | |
| 4. | ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು<br>ಎ ಉದ್ಧರಣ ಬಿ ವಾಕ್ಯವೇಷ್ಟನ<br>ಸಿ ಅರ್ಧವಿರಾಮ ಡಿ ಪೂರ್ಣವಿರಾಮ<br>**ಉತ್ತರ** ಸಿ ಅರ್ಧವಿರಾಮ | |
| 5 | [redacted] ಪದ ಈ ವ್ಯಾಕರಣಾಂಶಕ್ಕೆ ಸೇರಿದೆ<br>[redacted] ಕೃದಂತನಾಮ [redacted] ಕೃದಂತಭಾವನಾಮ<br>[redacted] ಕೃದಂತಾವ್ಯಯ [redacted] ತದ್ಧಿತಾಂತ ಭಾವನಾಮ<br>**ಉತ್ತರ** [redacted] ಕೃದಂತಭಾವನಾಮ | |
| 6 | [redacted] ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>[redacted] ಅಂಶಿ ಸಮಾಸ [redacted] ಕರ್ಮಧಾರಯ ಸಮಾಸ<br>[redacted] ಕ್ರಿಯಾ ಸಮಾಸ [redacted] ಗಮಕ ಸಮಾಸ<br>**ಉತ್ತರ** [redacted] ಕ್ರಿಯಾ ಸಮಾಸ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **II.** | **ಸಂಬಂಧಿಪದ ಬರೆಯುವುದು ([redacted]ತಿ ಸರಿಯುತ್ತರಕ್ಕೆ 1 ಅಂಕ[redacted]** | **4 × 1 = 4** |
| 7. | ಹಲವು : ಪರಿಮಾಣವಾಚಕ :: ತೆಂಕಣ :......................... | |
| | **ಉತ್ತರ** [redacted] ದಿಗ್ವಾಚಕ | |
| 8. | ಕೋಕಿಲಾ : ಕೋಗಿಲೆ : ವರ್ಣ :......................... | |
| | **ಉತ್ತರ** [redacted] ಬಣ್ಣ | |
| 9. | ಜನಕಾ : ಜನಕ್ಕೆ : ಇಸವಾಸ :......................... | |
| | **ಉತ್ತರ** [redacted] ವಿಶ್ವಾಸ | |
| 10. | ಕೆನೆಮೊಸರು : ಜೋಡುನುಡಿ :: ಸಾಕುಸಾಕು :......................... | |
| | **ಉತ್ತರ** [redacted] ದ್ವಿರುಕ್ತಿ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು**<br>**ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ** | **7 × 1 = 7** |
| 11. | ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ? | |
| | **ಉತ್ತರ :** | |
| | ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ [redacted]ಚೇರಿಂಗ್ ಕ್ರಾಸ್[redacted] | |
| 12. | ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ ? | |
| | **ಉತ್ತರ :** | |
| | ಬೆಳ್ಗೊಡೆಯ ಅಡಿಯಲ್ಲಿ ಪರಲೋಕ ಕಾಣುವುದಿಲ್ಲ. | |
| 13. | ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು ? | |
| | **ಉತ್ತರ :** | |
| | ಶಿವನಸಮುದ್ರದ ಬಳಿಯ ಕಾವೇರಿ ನದಿಯಿಂದ ಉತ್ಪಾದಿಸಿದ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆಯಾಗಿದೆ. | |
| 14. | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ? | |
| | **ಉತ್ತರ :** | |
| | ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವಗುರು, ದ್ವಿಜರ ಪೂಜೆಯನ್ನು ಮಾಡುತ್ತಾ ಕಳೆದನು. | |
| 15. | ಕವಿ ಜಿ.ಎಸ್. ಶಿವರುದ್ರಪ್ಪನವರು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ ? | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಉತ್ತರ :**<br>ಕವಿ ಜಿ.ಎಸ್. ಶಿವರುದ್ರಪ್ಪನವರು ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕಬೇಕೆಂದು ಹೇಳಿದ್ದಾರೆ. | |
| 16. | ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಹೇಗೆ ಕಂಡಿದೆ ?<br>**ಉತ್ತರ :**<br>ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಹೊಸ ಪಚ್ಚೆಯ ಜಮಖಾನೆಯಂತೆ ಕಂಡಿದೆ | |
| 17. | 'ಬಿಲ್ಲಹಬ್ಬ' ವನ್ನು ರಚಿಸಿದ ಕವಿ ಯಾರು<br>**ಉತ್ತರ :**<br>'ಬಿಲ್ಲಹಬ್ಬ' ವನ್ನು ರಚಿಸಿದ ಕವಿ ಮೂಲ್ಕಿಯ ವಾಸುದೇವ ಪ್ರಭು. | |
| **IV.** | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು ):** | **10 × 2 = 20** |
| 18. | ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ ?<br>**ಉತ್ತರ :**<br>ವಿ.ಕೃ. ಗೋಕಾಕ್ ಅವರು ಲಂಡನ್ನಿನ ಬೀದಿಯಲ್ಲಿ ತಿರುಗಾಡುತ್ತಿದ್ದ ಅಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಗಳನ್ನು ಗಮನಿಸುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ. ಸಿಕ್ಕಿಸಿದ ಪುಚ್ಛವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೇ ? ಒಬ್ಬ ಮನುಷ್ಯಳಂತೆ ಮತ್ತೊಬ್ಬಳಿಲ್ಲ ಎಂದು ಅಲ್ಲಿನ ಟೊಪ್ಪಿಗೆಗಳ ವಿಶೇಷತೆಯನ್ನು ದಾಖಲಿಸಿದ್ದಾರೆ. | |
| 19. | ನೆಹರೂ ಅವರು ವಿಶ್ವೇಶ್ವರಯ್ಯನವರನ್ನು ಕುರಿತು ಹೇಳಿದ ಮಾತುಗಳಾವುವು ?<br>**ಉತ್ತರ :**<br>"ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಬೆಂಗಳೂರಿನಲ್ಲಿ ವಿಶ್ವೇಶ್ವರಯ್ಯನವರ ಜನ್ಮ ಶತಮಾನೋತ್ಸವದಂದು ನೆಹರೂರವರು ಹೇಳಿದ ಮಾತುಗಳಾಗಿವೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 20. | ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು ? ತಿಳಿಸಿ.<br>**ಉತ್ತರ :**<br>ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ವಿಶ್ವೇಶ್ವರಯ್ಯನವರು ನಂಬಿದ್ದರು. ಅದಕ್ಕಾಗಿ ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತು "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಮನಗಂಡು ಅವರು ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. | |
| 21. | ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?<br>**ಉತ್ತರ :**<br>ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ ? ಆ ಮನೆಯ ಒಳಗೆ ಏನು ಸಂಭವಿಸುತ್ತಿದೆ ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಗಡಿಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಬ್ಲಾಕ್‌ಔಟ್ ನಿಯಮ ಪಾಲಿಸುತ್ತಿರುವ ಈ ಸಮಯದಲ್ಲಿ ಆ ಮನೆಯ ಒಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ? ಎಂಬ ಪ್ರಶ್ನೆಗಳು ಮೂಡಿದವು. | |
| 22. | ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕೆಂದು ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?<br>**ಉತ್ತರ :**<br>ಮನುಷ್ಯ ಸಮಾಜದಲ್ಲಿ ಮೇಲು-ಕೀಳು, ಜಾತಿ-ಮತ, ಧರ್ಮ-ಭಾಷೆ ಇತ್ಯಾದಿಗಳಲ್ಲಿ ಮುಳುಗಿ ಹೋಗಿದ್ದಾನೆ. ಮನುಷ್ಯರನ್ನು ಸಂಪರ್ಕಿಸದಂತೆ ಗೋಡೆ ಕಟ್ಟಿಕೊಂಡಿದ್ದಾನೆ. ಈ ಗೋಡೆಗಳನ್ನು ಕೆಡವಿ, ಇವರ ಜೀವನದಲ್ಲಿ ಹೊಸ ಭರವಸೆ ಮೂಡಿಸಬೇಕು ಒಬ್ಬರನ್ನೊಬ್ಬರು ಸಂಪರ್ಕಿಸುವಂತೆ ಸೇತುವೆಗಳನ್ನು ನಿರ್ಮಿಸಬೇಕು. ಯಾವುದೇ ಸವಾಲುಗಳು ಎದುರಾದರೂ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 23. | ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು [redacted]<br>**ಉತ್ತರ** [redacted]<br>ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕ್ಷಣಕಾಲ ಏನನ್ನೂ ಉತ್ತರಿಸದ ಕರ್ಣ ನಂತರ ಕೃಷ್ಣನನ್ನು ಕುರಿತು [redacted]ಹುಚ್ಚು ಕೃಷ್ಣ, ನಾನು ಈ ರಾಜ್ಯದ ಸಿರಿಗೆ ಸೋಲುವವನಲ್ಲ. ಕೌರವರು ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಮನಸ್ಸಿಲ್ಲ ನನ್ನನ್ನು ಕಾಪಾಡಿದ ಒಡೆಯನಿಗೆ ಪಾಂಡವರ ಶಿರಗಳನ್ನು ಕಡಿದು ತಂದೊಪ್ಪಿಸಬೇಕೆಂಬ ಆತುರದಲ್ಲಿದ್ದಾಗ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ[redacted]ಎಂದು ಹೇಳಿದನು. | |
| 24. | ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ [redacted]<br>**ಉತ್ತರ** [redacted]<br>ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆಯೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ದೊರೆವುದೆಂದು ವಿವೇಕಾನಂದರು ಹೇಳಿದ್ದಾರೆ. | |
| 25. | ಭಗತ್‌ಸಿಂಗ್ ಹೇಗೆ ಅಮರನಾದನು [redacted]<br>**ಉತ್ತರ** [redacted]<br>ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆದನು. [redacted]ಇಂಕ್ವಿಲಾಬ್ ಜಿಂದಾಬಾದ್[redacted] ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯಕ್ಕೋಸ್ಕರ ತನ್ನ ಜೀವವನ್ನೇ ಅರ್ಪಿಸಿ ಮರಣ ದಂಡನೆಗೆ ಈಡಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಗುರಿಯನ್ನು ತೋರಿಸಿಕೊಟ್ಟು ಪ್ರಾಣಾರ್ಪಣೆ ಮಾಡಿದ ಭಗತ್‌ಸಿಂಗ್ ತನ್ನ ತ್ಯಾಗ ಬಲಿದಾನದಿಂದ ಅಮರನಾದನು. | |
| 26. | [redacted]ವಸಂತ ಮುಖ ತೋರಲಿಲ್ಲ[redacted] ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ [redacted] | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಉತ್ತರ :**<br>ಒಡೆಯನ ಅಂಗಳದಲ್ಲಿದ್ದ ಮಾವಿನ ಮರಗಳು ಮೈತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಬಿಚ್ಚಿ ಸ್ವಚ್ಛಂದವಾಗಿ ಹಾರಾಡುತ್ತಿವೆ. ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ವಸಂತನ ಆಗಮನದ ಹಿನ್ನೆಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ. ಹೀಗೆ ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | |
| 27. | ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?<br>**ಉತ್ತರ :**<br>ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲು ಕುಡಿ ಎಂಬ ಬೂದುಬಣ್ಣದ ಗಿಡದ ಎಳೆಯ ಕುಡಿಯನ್ನು ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿ ನಂತರ ಎಣ್ಣೆಯಲ್ಲಿ ಅದ್ದಿದಾಗ ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗುತ್ತಿತ್ತು. ಇದನ್ನು ನಿತ್ಯ ಆರತಿಗೆ ಬಳಸುತ್ತಿದ್ದರು. ನಾಗಸಂಪಿಗೆ ಮರದ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನಾಗಿ ಮಾಡಿ ದೀಪಾವಳಿ ಕಾರ್ತೀಕ ಮಾಸದಲ್ಲಿ ಉರಿಸುತ್ತಿದ್ದರು. ಜವಾರಿ ಹತ್ತಿ ಗಿಡಗಳು ಬಿಡುತ್ತಿದ್ದ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಹೀಗೆ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು** [redacted] | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಸಾರಾ ಅಬೂಬಕ್ಕರ್ :<br>**ಉತ್ತರ** [redacted] | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಲೇಖಕಿ ಸಾರಾ ಅಬೂಬಕ್ಕರ್ ಅವರು ಸಾ.ಶ. ೧೯೩೬ ಜೂನ್ [redacted] ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ - ಕಾದಂಬರಿಗಳನ್ನು, ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಎಂಬ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ' ಪ್ರಶಸ್ತಿ ಲಭಿಸಿದೆ.<br>ಕುವೆಂಪು<br>***ಉತ್ತರ:***<br>'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ ಸಾ.ಶ. ೧೯೦೪ ರ ಡಿಸೆಂಬರ್ ೨೯ ರಂದು ಜನಿಸಿದರು. ಇವರು 'ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ' - ಕವನಸಂಕಲನಗಳು, 'ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು' - ಕಥಾಸಂಕಲನಗಳು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು - ಕಾದಂಬರಿಗಳು. ತಪೋನಂದನ, ರಸೋವೈಸಃ - ವಿಮರ್ಶಾ ಸಂಕಲನಗಳು. ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ ಎಂಬ ಮಕ್ಕಳ ಪುಸ್ತಕಗಳು. ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್ - ನಾಟಕಗಳು, ನೆನಪಿನ ದೋಣಿಯಲ್ಲಿ - ಆತ್ಮಕಥನ ಶ್ರೀರಾಮಾಯಣದರ್ಶನಂ ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ ರಾಷ್ಟ್ರಕವಿ, ಪಂಪ ಪ್ರಶಸ್ತಿ, ಗೌರವ ಡಾಕ್ಟರೇಟ್ ಪುರಸ್ಕಾರಗಳು ದೊರೆತಿವೆ. | |

<table>
<tr><th></th><th>ಪ್ರಶ್ನಾನುಸಾರ ಮೌಲ್ಯಮಾಪನ</th><th>ಅಂಕಗಳು</th></tr>
<tr><td>VI.</td><td>ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :</td><td>1 × 3 = 3</td></tr>
<tr><td></td><td>ಪ್ರಸ್ತಾರ ಹಾಕುವುದು</td><td>1 ಅಂಕ</td></tr>
<tr><td></td><td>ಗಣ ವಿಭಾಗಿಸುವುದು</td><td>1 ಅಂಕ</td></tr>
<tr><td></td><td>ಛಂದಸ್ಸಿನ ಹೆಸರು ಬರೆಯುವುದು</td><td>1 ಅಂಕ</td></tr>
<tr><td></td><td>ಒಟ್ಟು</td><td>3 ಅಂಕಗಳು</td></tr>
<tr><td>30.</td><td>ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿದೇಶದೊಳ್<br>
<table>
<tr><td>ಭ</td><td>ರ</td><td>ನ</td><td>ಭ</td><td>ಭ</td><td>ರ</td><td>ಲ+ಗು</td></tr>
<tr><td>— U U</td><td>— U —</td><td>U U U</td><td>— U U</td><td>— U U</td><td>— U —</td><td>U —</td></tr>
<tr><td>ಕೋಗಿಲೆ</td><td>ಯಾಗಿ ಪು</td><td>ಟ್ಟುವುದು</td><td>ನಂದನ</td><td>ದೊಳ್ ವನ</td><td>ವಾಸಿ ದೇ</td><td>ಶದೊಳ್</td></tr>
</table>
ಛಂದಸ್ಸು : ಇದು ಅಕ್ಷರಗಣ ಛಂದಸ್ಸಿನ ಉತ್ಪಲಮಾಲಾ ವೃತ್ತ ದ ಲಕ್ಷ್ಯವಾಗಿದೆ.</td><td></td></tr>
<tr><td>VII.</td><td>ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು:</td><td>1 × 3 = 3</td></tr>
<tr><td></td><td>ಅಲಂಕಾರವನ್ನು ಹೆಸರಿಸುವುದು</td><td>1 ಅಂಕ</td></tr>
<tr><td></td><td>ಲಕ್ಷಣ ಬರೆಯುವುದು</td><td>1 ಅಂಕ</td></tr>
<tr><td></td><td>ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು</td><td>1 ಅಂಕ</td></tr>
<tr><td></td><td>ಒಟ್ಟು</td><td>3 ಅಂಕಗಳು</td></tr>
<tr><td>31.</td><td>“ ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು. ”<br>
ಉತ್ತರ :<br>
ಅಲಂಕಾರದ ಹೆಸರು ಉಪಮಾಲಂಕಾರ<br>
ಲಕ್ಷಣ: ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.<br>
ಸಮನ್ವಯ : ಉಪಮೇಯ : ಮನೋರಮೆಯ ಹಣೆ<br>
ಉಪಮಾನ : ಬಾಲಚಂದ್ರ<br>
ಉಪಮಾವಾಚಕ : ಅಂತೆ<br>
ಸಮಾನಧರ್ಮ : ಆಕರ್ಷಣೀಯವಾಗಿರುವುದು<br>
ಇಲ್ಲಿ ಉಪಮೇಯವಾದ ಮನೋರಮೆಯ ಹಣೆಯನ್ನು ‘ಬಾಲಚಂದ್ರ’ ನಿಗೆ ಹೋಲಿಸಲಾಗಿದೆ. ‘ಅಂತೆ’ ಎಂಬ ಉಪಮಾವಾಚಕ ಪದವಿದ್ದು, ‘ಆಕರ್ಷಣೀಯವಾಗಿರುವುದು’ ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರ (ಪೂರ್ಣೋಪಮಾಲಂಕಾರದ) ಲಕ್ಷ್ಯವಾಗಿದೆ.</td><td></td></tr>
</table>

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VIII. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.<br>**ಅಥವಾ**<br>ಅತಿ ಆಸೆ ಗತಿಗೇಡು. | |
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಾತ್ರದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."<br>**ಉತ್ತರ :**<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ರಚಿಸಿರುವ ಕಾದಂಬರಿ ಕೃತಿಯಿಂದ ಆಯ್ದ ಶುಕನಾಸನ ಉಪದೇಶ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ :** ಶುಕನಾಸನು ಯುವರಾಜನಾದ ಚಂದ್ರಾಪೀಡನಿಗೆ ಅತ್ಯಂತ ಜವಾಬ್ದಾರಿಯುತ ಮಂತ್ರಿಯಾಗಿ ಪ್ರಾಯೋಗಿಕ ಹಾಗೂ ಅನುಭವಗಮ್ಯವಾದ ಉಪದೇಶವನ್ನು ಹೇಳುತ್ತಾ, ಗುರೂಪದೇಶ ಎಂಬುದು ನೀರಿಲ್ಲದ ಮೀಹ, ಬೊಜ್ಜು ಬೆಳೆಯದೆ ಬರುವ ಗುರುತ್ವ, ಬೆಲೆಬಾಳುವ ಕಿವಿಯೋಲೆ, ಪಂಜು ಇಲ್ಲದೆ ಬೆಳಗುವ ಬೆಳಕು, ಉದ್ವೇಗ ಬರಿಸದ ಜಾಗರಣೆ ಎಂದು ಗುರೂಪದೇಶದ ಮಹತ್ವ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಸ್ವಾರಸ್ಯ :** ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಮಾತಿನಂತೆ ಗುರೂಪದೇಶವು ಅತ್ಯಂತ ಮಹತ್ವದ್ದಾಗಿದ್ದು ಗುರೂಪದೇಶದಿಂದ ಬಾಳು ಬೆಳಗುತ್ತದೆ. ಧನಾತ್ಮಕ ಬದಲಾವಣೆಯಾಗುತ್ತದೆ ಎಂಬ ಮಹತ್ವ ಸಾರುವ ಈ ಸಾಲು ಅತ್ಯಂತ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 34. | "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"<br>**ಉತ್ತರ :**<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದಿರುವ ವಡ್ಡಾರಾಧನೆ ಕೃತಿಯಿಂದ ಆಯ್ದ ಸುಕುಮಾರಸ್ವಾಮಿಯ ಕಥೆ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ :** ವ್ಯಾಪಾರಿಯೋರ್ವ ರತ್ನಗಂಬಳಿಯನ್ನು ಮಾರಲು ರಾಜನಾದ ವೃಷಭಾಂಕ ಮತ್ತು ರಾಣಿ ಜ್ಯೋತಿರ್ಮಾಲೆಯರ ಬಳಿಗೆ ಹೋಗಿ ಅದರ ಬೆಲೆ ಲಕ್ಷದೀನಾರಗಳು ಎಂದಾಗ ಆತ ಕೊಳ್ಳಲಾರದೆ ಕಳುಹಿಸುತ್ತಾನೆ. ನಂತರ ಯಶೋಭದ್ರೆಯ ಬಳಿಗೆ ಹೋಗಿ ಆ ರತ್ನಗಂಬಳಿಯನ್ನು ತೋರಿಸಿದಾಗ ಲಕ್ಷದೀನಾರ ಕೊಟ್ಟು ರತ್ನಗಂಬಳಿಯನ್ನು ಕೊಂಡು ಮೂವತ್ತೆರಡು ತುಂಡುಗಳಾಗಿ ಮಾಡಿ ತನ್ನ ಸೊಸೆಯರಿಗೆ ನೀಡಿದಳು. ಅವರು ತಮ್ಮ ಪಾದುಕೆಗಳಲ್ಲಿ ಸಿಕ್ಕಿಸಿಕೊಂಡ ವಿಷಯ ತಿಳಿದ ರಾಜ ಯಶೋಭದ್ರೆಯ ಮನೆಗೆ ಹೋಗಬೇಕೆಂದು ಇಚ್ಛಿಸಿದಾಗ, ರಾಜನನ್ನು ಆಹ್ವಾನಿಸಿ ಯಶೋಭದ್ರೆ ಸಕಲ ವೈಭೋಗದಿಂದ ಸತ್ಕರಿಸಿದಳು. ಸುಕುಮಾರಸ್ವಾಮಿಯ ಆ ವೈಭೋಗವನ್ನು ಕಂಡು ರಾಜ ಅವನನ್ನು ಹೊಗಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸ್ವಾರಸ್ಯ :** ಸಕಲ ಸುಖ ವೈಭೋಗದಿಂದ ಮೆರೆಯುತ್ತಿರುವ ಸುಕುಮಾರಸ್ವಾಮಿಯನ್ನು ಕಂಡು ಇಂತಹ ಸೌಭಾಗ್ಯ ರಾಜನಾದ ತನ್ನ ಅರಮನೆಯಲ್ಲೂ ಇಲ್ಲ. ಸುಕುಮಾರಸ್ವಾಮಿಯಂತಹ ಭಾಗ್ಯವಂತ ಮತ್ತಾರೂ ಇಲ್ಲವೆಂದು ಹೊಗಳುವುದು ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 35. | "ಕಿಡೆದುಪೊನ್ನಂ ತೆಗೆದುಕೊಳ್ವಂ" <br> **ಉತ್ತರ :** <br> **ಆಯ್ಕೆ :** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ರಚಿಸಿರುವ ಕರ್ಣಾಟಕ ಪಂಚತಂತ್ರಂ ಕೃತಿಯಿಂದ ಆಯ್ದ ವೃಕ್ಷಸಾಕ್ಷಿ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. <br> **ಸಂದರ್ಭ :** ದುಷ್ಟಬುದ್ಧಿ ಧರ್ಮಬುದ್ಧಿಯವರಿಬ್ಬರೂ ವ್ಯಾಪಾರದಿಂದ ಸಂಪಾದಿಸಿಕೊಂಡು ಬಂದ ಹೊನ್ನನ್ನು ತಮಗೆ ವ್ಯಯಕ್ಕೆ ಬೇಕಾದಷ್ಟು ತೆಗೆದುಕೊಂಡು, ಉಳಿದ ಹೊನ್ನನ್ನು ವಟವೃಕ್ಷದ ಬುಡದಲ್ಲಿ ಹೂತಿಟ್ಟು ತಮ್ಮ ತಮ್ಮ ಮನೆಗೆ ತೆರಳಿದರು. ಕೆಲವು ದಿನಗಳ ನಂತರ ಧರ್ಮಬುದ್ಧಿಯನ್ನು ವಂಚಿಸಿ ದುಷ್ಟಬುದ್ಧಿ ಹೊನ್ನನ್ನು ಕದ್ದೊಯ್ಯುತ್ತಾನೆ. ನಂತರ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ಈ ಮೇಲಿನ ಮಾತನ್ನು ದುಷ್ಟಬುದ್ಧಿ ಹೇಳುತ್ತಾನೆ. <br> **ಸ್ವಾರಸ್ಯ :** ಆತ್ಮೀಯ ಗೆಳೆಯನಾದ ಧರ್ಮಬುದ್ಧಿಯನ್ನು ವಂಚಿಸುವ, ಮೋಸ ಮಾಡುವ, ದುಷ್ಟಬುದ್ಧಿಯ ಮಿತ್ರದ್ರೋಹ, ವಿಶ್ವಾಸದ್ರೋಹ, ದುಷ್ಟತನ, ಅವನಲ್ಲಿರುವ ದುರ್ಗುಣಗಳು ಅವನ ಹೆಸರಿಗೆ ತಕ್ಕಂತೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 36. | "ಹರಿಯ ಹಗೆ ಹೊಗೆದೋರದುರುಹದೆ ಬರಿದೆ ಹೋಹುದೆ" <br> **ಉತ್ತರ :** <br> **ಆಯ್ಕೆ :** ಪ್ರಸ್ತುತ ವಾಕ್ಯವನ್ನು ಕುಮಾರವ್ಯಾಸ ವಿರಚಿತ ಕರ್ಣಾಟ ಭಾರತ ಕಥಾಮಂಜರಿ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭ :** ಕರ್ಣನನ್ನು ಯುದ್ಧದಿಂದ ವಿಮುಖಗೊಳಿಸಬೇಕೆಂದು ಪಣತೊಟ್ಟ ಕೃಷ್ಣನು ಕರ್ಣನಿಗೆ ಅವನ ಜನ್ಮ ರಹಸ್ಯವನ್ನು ತಿಳಿಸಿ ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ, ಎಡಬಲದಲ್ಲಿ ಪಾಂಡವ ಕೌರವರು, ಎದುರಲಿ ಮಾದ್ರ, ಮಾಗಧ, ಯಾದವಾದಿಗಳು ಇರುತ್ತಾರೆ ಎಂದು ಹೇಳಿದಾಗ ಕರ್ಣನಿಗೆ ಕೃಷ್ಣನ ಕುತಂತ್ರ ಅರಿಯಲಾಗದೆ ಮನಸ್ಸಿನಲ್ಲಿಯೇ ಕೃಷ್ಣನ ತಂತ್ರದ ಫಲ ಏನಾಗಬಹುದು ಎಂದು ಕರ್ಣನು ಊಹಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | **ಸ್ವಾರಸ್ಯ :** ದಾನಶೂರ ಕರ್ಣನು ಯುದ್ಧದಿಂದ ವಿಮುಖನಾದರೆ ಪಾಂಡವರಿಗೆ ಜಯ ಸಾಧ್ಯ ಎಂಬುದನ್ನು ಅರಿತಿದ್ದ ಶ್ರೀಕೃಷ್ಣನು ಭೇದ ತಂತ್ರದ ಮೂಲಕ ಕರ್ಣನ ಜನ್ಮರಹಸ್ಯ ತಿಳಿಸಿ ಕರ್ಣನ ಬಲ ಕುಗ್ಗಿಸಿ ದುರ್ಯೋಧನನ ಶಕ್ತಿ ಕುಗ್ಗುವಂತೆ ಮಾಡುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |
| 37. | "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು " | |
| | **ಉತ್ತರ :** | |
| | **ಆಯ್ಕೆ :** ಪ್ರಸ್ತುತ ವಾಕ್ಯವನ್ನು ರನ್ನ ಕವಿ ವಿರಚಿತ ಸಾಹಸ ಭೀಮ ವಿಜಯಂ ಮಹಾಕಾವ್ಯದಿಂದ ಆಯ್ದ ಛಲಮನೆ ಮೆಱೆವೆಂ ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | **ಸಂದರ್ಭ :** ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬಾಳಲು ನೀಡಿದ ಭೀಷ್ಮರ ಸಲಹೆಯನ್ನು ತಿರಸ್ಕರಿಸಿದ ದುರ್ಯೋಧನ ತಾನು ನೆಲಕ್ಕಾಗಿ ಹೋರಾಡುತ್ತಿಲ್ಲ ಛಲಕ್ಕಾಗಿ ಹೋರಾಡುತ್ತೇನೆ. ಕರ್ಣನನ್ನು ಕೊಲ್ಲಿಸಿದ ಈ ಭೂಮಿ ನನಗೆ ಹಾಳು ಭೂಮಿ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಸ್ವಾರಸ್ಯ** : ತನ್ನ ಸಹೋದರ ಮತ್ತು ಸ್ನೇಹಿತನನ್ನು ಕೊಂದ ಭೀಮಾರ್ಜುನರ ಮೇಲಿದ್ದ ಕೋಪ, ಯುದ್ಧವನ್ನು ಮಾಡಿಯೇ ತೀರಬೇಕೆಂಬ ದುರ್ಯೋಧನನ ಛಲದ ಗುಣ ಅವನ ಸ್ವಭಾವಕ್ಕೆ ತಕ್ಕುದಾಗಿ ಮೂಡಿ ಬಂದಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 38. | "ವಿದ್ಯಾಧನಮೆ ಧನಮಪ್ಪುದು"<br>**ಉತ್ತರ** :<br>**ಆಯ್ಕೆ** : ಪ್ರಸ್ತುತ ವಾಕ್ಯವನ್ನು ಆದಿಕವಿ ಪಂಪ ವಿರಚಿತ ವಿಕ್ರಮಾರ್ಜುನ ವಿಜಯಂ ಕಾವ್ಯದಿಂದ ಆಯ್ದ ಕೆಮ್ಮನೆ ಮೀಸೆವೊತ್ತೆನೇ ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ** : ದ್ರೋಣಾಚಾರ್ಯರಿಗೆ ಬಡತನ ಬಂದಿದ್ದರಿಂದ ಅಶ್ವತ್ಥಾಮನೊಂದಿಗೆ ಪರಶುರಾಮರ ಬಳಿಗೆ ಸಂಪತ್ತನ್ನು ಬೇಡಲು ಬರುತ್ತಾರೆ. ಆ ವೇಳೆಗೆ ಪರಶುರಾಮನು ತನ್ನಲ್ಲಿದ್ದ ಸಕಲವನ್ನೂ ಬೇಡಿದವರಿಗೆ ಮತ್ತು ಭೂಮಿಯನ್ನು ಗುರುಗಳಿಗೆ ದಾನಮಾಡಿ ಜಟಾಧಾರಿಯಾಗಿ ನಾರುಮಡಿಯನ್ನುಟ್ಟು ತಪೋವನಕ್ಕೆ ಹೋಗಲು ಸಿದ್ಧನಾಗಿದ್ದನು. ಈಗ ನನ್ನ ಬಳಿಯಿರುವುದು ಕೇವಲ ಬಿಲ್ಲು ಮತ್ತು ಬಾಣಗಳ ಸಮೂಹ ಮಾತ್ರ ಎಂದು ಹೇಳುತ್ತಾನೆ. ಈ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.<br>**ಸ್ವಾರಸ್ಯ** : ಎಲ್ಲಾ ಸಂಪಾದನೆಗಿಂತ ಶ್ರೇಷ್ಠವಾದದ್ದು ವಿದ್ಯೆ. ವಿದ್ಯೆಯಿಂದ ಸಂಪತ್ತನ್ನು ಗಳಿಸಬಹುದು. ಶ್ರೇಷ್ಠವಾದ ವಿದ್ಯೆಯನ್ನು ಸಂಪತ್ತು ಎಂದು ಭಾವಿಸಿ ಬೇಡಿರುವುದು ಔಚಿತ್ಯಪೂರ್ಣವಾಗಿ ಮೂಡಿಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **X.** | **ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ ):** | **1 × 4 = 4** |
| 39. | ನೀಲಮೇಘಮಂಡಲ– ..........................................<br>..................................................................<br>..................................................................<br>........................................................... ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ..............................................<br>..................................................................<br>..................................................................<br>........................................................... ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಉತ್ತರ :**<br>ನೀಲಮೇಘಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ? | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XI. | **ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।<br>ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।<br>ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥<br>ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।<br>ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।<br>ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥<br>**ಉತ್ತರ :**<br>ಪ್ರಸ್ತುತ ಪದ್ಯಭಾಗವನ್ನು ಲಕ್ಷ್ಮೀಶ ಕವಿ ರಚಿಸಿರುವ ವೀರಲವ ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಬ್ರಹ್ಮಹತ್ಯಾ ದೋಷದ ಪರಿಹಾರಕ್ಕಾಗಿ ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆ ದೇಶದೆಲ್ಲೆಡೆ ಸಂಚರಿಸುತ್ತಿರುವಾಗ ರಾಜ ಮಹಾರಾಜರೆಲ್ಲ ಅದನ್ನು ಕಟ್ಟಲಾರದೆ ನಮಿಸಿ ಕಳುಹಿಸುತ್ತಾರೆ. ವರುಣ ಲೋಕಕ್ಕೆ ತೆರಳುವ ಮುನ್ನ ವಾಲ್ಮೀಕಿ ಮಹರ್ಷಿಗಳು ಲವನನ್ನು ತೋಟದ ಕಾವಲಿಗೆ ನೇಮಿಸುತ್ತಾರೆ. ಲವ ತನ್ನ ಸ್ನೇಹಿತರೊಡನೆ ಆಟವಾಡುತ್ತಿದ್ದಾಗ ಕುದುರೆ ವಾಲ್ಮೀಕಿ ಋಷಿಯ ಆಶ್ರಮದ ತೋಟವನ್ನು ಚೆನ್ನಾಗಿ ತುಳಿಯುತ್ತಿರುವುದನ್ನು ಕಂಡು ಕುದುರೆಯ ಬಳಿಗೆ ಬಂದು ಕುದುರೆಯ ಹಣೆಯ ಮೇಲೆ ಹೊಳೆವ ಪಟ್ಟದ ಲಿಖಿತವನ್ನು ಕಂಡು ಓದಿಕೊಳ್ಳುತ್ತಾನೆ. ಸಮರ್ಥರಾದವರು ಯಾರಾದರೂ ಇದ್ದರೆ ಕುದುರೆಯನ್ನು ತಡೆಯಿರಿ ಎಂದಿದ್ದ ಲೇಖನವನ್ನು ಓದಿ ಈ ರಾಮನ ಗರ್ವವನ್ನು ಬಿಡಿಸಬೇಕೆಂದು ತನ್ನ ಉತ್ತರೀಯದಿಂದ ಕುದುರೆಯ ಕುತ್ತಿಗೆಗೆ ಬಿಗಿದು ಬಾಳೆಗಿಡಕ್ಕೆ ಕಟ್ಟುತ್ತಾನೆ. ಇದನ್ನು ನೋಡಿದ ಋಷಿ ಪುತ್ರರು ಹೆದರಿ ನಡುಗಿ ಬೇಡಬೇಡ ಅರಸರ ಕುದುರೆಯನ್ನು ಬಿಡು ಇಲ್ಲದಿದ್ದರೆ ನಮ್ಮನ್ನು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಡಿವರು ಎಂದು ಹೇಳಿದಾಗ, ಲವನು ಪಾರ್ವರ ಮಕ್ಕಳು ಹೆದರಿದರೆ ಜಾನಕಿಯ ಮಗನಿದಕ್ಕೆ ಹೆದರುವುದಿಲ್ಲ ನೀವು ಇಲ್ಲಿಂದ ಹೊರಟುಹೋಗಿ ಎಂದು ಶೌರ್ಯದಿಂದ ಬಿಲ್ಲನ್ನು ಸಿದ್ಧಪಡಿಸಿ ಜೇಗೈದು ನಿಲ್ಲುತ್ತಾನೆ.<br>ಲವನು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ ವೀರತೆಯಿಂದ ಕುದುರೆಯನ್ನು ಕಟ್ಟುತ್ತಾನೆ ಕಷ್ಟ ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿ ಹಾಗೂ ಋಷಿ ಪುತ್ರರ ಸಾಧು ಸ್ವಭಾವ, ಲವನ ಕ್ಷಾತ್ರಗುಣ, ಸೀತೆ ಲವನನ್ನು ಬೆಳೆಸಿದ ರೀತಿ ಇಲ್ಲಿ ಅಡಕವಾಗಿರುವ ಮೌಲ್ಯವಾಗಿದೆ. | |
| **XII.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು** | **2 × 4 = 8** |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ತಾಳಿದವನು ಬಾಳಿಯಾನು ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ? ವಿವರಿಸಿ.<br>**ಅಥವಾ**<br>ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಉತ್ತರ :**<br>ಮತಂಗಾಶ್ರಮದಲ್ಲಿ ವಾಸವಿದ್ದ ಪರಮ ರಾಮಭಕ್ತೆಯಾದ ಶಬರಿಯು ತಮ್ಮ ಗುರುಗಳ ಕಾಲಾನಂತರ ರಾಮನ ದರ್ಶನದ ನಿರೀಕ್ಷೆಯಲ್ಲಿ ಸದಾ ರಾಮ ಜಪ ಮಾಡುತ್ತಾ ಹಲವಾರು ವರ್ಷಗಳ ಕಾಲ ರಾಮನ ಬರುವಿಕೆಯ ಭರವಸೆಯಿಂದ ರಾಮನಿಗಾಗಿ ಪ್ರತಿನಿತ್ಯ ಹೂವು, ಹಣ್ಣು, ಮಧುಪರ್ಕ, ಮಾಲೆಯನ್ನು ಕಟ್ಟಿ ವೇದಿಯನ್ನು ಶೃಂಗರಿಸುತ್ತಾ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸ್ವಲ್ಪವೂ ಬೇಸರಗೊಳ್ಳದೆ ಪ್ರತಿನಿತ್ಯ ಶ್ರದ್ಧೆಯಿಂದ ರಾಮನಿಗಾಗಿ ಕಾತರಿಸಿ ಕಾಯುತ್ತಿದ್ದಳು. ಅತ್ಯಂತ ವೃದ್ಧೆಯಾದರೂ ರಾಮನ ಬರುವಿಕೆಯ ಭರವಸೆಯಿಂದ ರಾಮಧ್ಯಾನದಲ್ಲಿದ್ದಾಗ ವನವಾಸದಲ್ಲಿದ್ದ ಶ್ರೀರಾಮನು ಸೀತೆಯನ್ನು ಕಳೆದುಕೊಂಡು, ಆಕೆಯನ್ನು ಹುಡುಕುತ್ತಾ ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಕಬಂಧ ರಾಕ್ಷಸ ಅಡ್ಡ ಬಂದಾಗ ಆತನನ್ನು ಸಂಹರಿಸಿ ಮುಕ್ತಿ ನೀಡಿ ಆತನಿಂದ ಸುಗ್ರೀವ ಮತ್ತು ತಮಗಾಗಿ ಕಾಯುತ್ತಿರುವ ಶಬರಿಯ ಬಗ್ಗೆ ತಿಳಿದು ಶಬರಿಯನ್ನು ಅರಸಿ ಮತಂಗಾಶ್ರಮಕ್ಕೆ ಬರುತ್ತಾರೆ. ಅಲ್ಲಿ ರಾಮನ ಬರುವಿಕೆಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿರುವ ಶಬರಿಯನ್ನು ಕಂಡು ಅವಳಿಗೆ ದರ್ಶನವನ್ನು ನೀಡುತ್ತಾರೆ. ರಾಮಲಕ್ಷ್ಮಣರ ದರ್ಶನದಿಂದ ಪುನೀತಳಾದ ಶಬರಿಯು ರಾಮಲಕ್ಷ್ಮಣರನ್ನು ಅತ್ಯಂತ ಆದರದಿಂದ ಸತ್ಕರಿಸಿ ತನ್ನ ಮನದ ಬಯಕೆಯನ್ನು ಬಹುಕಾಲದ ಸಂಕಲ್ಪವನ್ನು ಪೂರೈಸಿಕೊಳ್ಳುತ್ತಾಳೆ. ಕೊನೆಗೆ ರಾಮಲಕ್ಷ್ಮಣರಿಂದ ಮುಕ್ತಿಯನ್ನು ಪಡೆದುಕೊಳ್ಳುತ್ತಾಳೆ. ಹೀಗೆ ಶಬರಿಯು ತಾಳಿದವನು ಬಾಳಿಯಾನು ಎಂಬ ಮಾತಿನಂತೆ ಸುದೀರ್ಘಕಾಲ ಕಾಯ್ದು ರಾಮನ ದರ್ಶನ ಪಡೆದದ್ದು ಅವಳ ತಾಳ್ಮೆ ಮತ್ತು ನಂಬಿಕೆಗೆ ಸಾಕ್ಷಿ ಎನ್ನುವಂತಿದೆ. | |
| | **ಅಥವಾ** | |
| | ನಂಬಿ ಕೆಟ್ಟವರಿಲ್ಲ ಎಂಬ ಮಾತಿನಂತೆ ಅಯೋಧ್ಯಾ ಪುರುಷ ರಾಮನ ದರ್ಶನವೇ ಬಾಳಿನ ಅತಿದೊಡ್ಡ ಮತ್ತು ಅಂತಿಮ ಆಸೆಯೆಂದು ಕಾಯುತ್ತಿದ್ದ ಮತಾಂಗಾಶ್ರಮದ ವಾಸಿ ಪ್ರೇಮಶುದ್ಧೆ ಶಬರಿಯು ಅನಂತ ಕಾಲದಿಂದ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು. ರಾಮಬಾರದೆ ನನಗೇನು ತೋರದೆ ಎನ್ನುತ್ತಾ ರಾಮಜಪವನ್ನು ನಿಷ್ಠೆಯಿಂದ ಭಜಿಸುತ್ತಿದ್ದಳು. ಒಮ್ಮೆ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. ಆಗ ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆದರಿಸಿ, ಆನಂದಿಸಿ ಮಾತೃಭಾವದಿಂದ ಸೇವೆಯನ್ನು ಮಾಡಿ ತೃಪ್ತಳಾಗಿ ತನ್ನ ಮನದ ಇಂಗಿತವನ್ನು ಪೂರೈಸಿಕೊಂಡು ಭಕ್ತಿಯ ಶಕ್ತಿಯನ್ನು ಜಗತ್ತಿಗೆ ಸಾರಿ ಹೇಳಿದ ಶಬರಿಯು ತಾಳಿದವನು ಬಾಳಿಯಾನು ಎಂಬ ಮಾತಿನಂತೆ ತನ್ನ ಪರಿಶುದ್ಧ ಪ್ರೇಮ ಭಕ್ತಿಯಿಂದ ಮತಂಗ ಮುನಿಗಳು ಹೇಳಿದ ಮಾತಿನಂತೆ ರಾಮದರ್ಶನ ಮಾಡಿ ನಂತರ ಅವರಿಂದಲೇ ಮುಕ್ತಿಯನ್ನು ಪಡೆದ ಪರಿ ಗುರುಗಳ ಮೇಲಿದ್ದ ನಂಬಿಕೆ, ವಿಶ್ವಾಸ ಹುಸಿಯಾಗಲಿಲ್ಲ. ಎಂಬುದು ಶಬರಿ ಗೀತನಾಟಕದಲ್ಲಿ ಸೊಗಸಾಗಿ ಮೂಡಿಬಂದಿದೆ. ಹೀಗೆ ಧನ್ಯತೆಯ ಭಾವನೆಯಿಂದ ಮುಕ್ತಿ ಬಯಸಿದ ಶಬರಿಯ ಚಿಂತೆ ಹಿಂಗಿಹೋಯಿತು. | |
| 42. | ಹಲಗಲಿ ದಂಗೆಯ ಪರಿಣಾಮವೇನು ? ವಿವರಿಸಿ.<br>**ಅಥವಾ**<br>ಹಲಗಲಿ ದಂಗೆಗೆ ಕಾರಣವಾದ ಅಂಶಗಳು ಮತ್ತು ಬ್ರಿಟಿಷ್ ಸರ್ಕಾರ ನಿಯಂತ್ರಿಸಿದ ಬಗೆಯನ್ನು ಕುರಿತು ಬರೆಯಿರಿ.<br>**ಉತ್ತರ :**<br>ಸ್ವಾತಂತ್ರ್ಯ ವೀರ ಹೋರಾಟಗಾರರು. ಸ್ವಾಭಿಮಾನಿಗಳೂ ಆದ ಹಲಗಲಿ ಬೇಡರು ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತದ ಮೇಲೆ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದರು. ಹನುಮ, ಬಾಲ, ಜಡಗ, ರಾಮ ಮುಂತಾದ ಹಲಗಲಿಯ ಪ್ರಮುಖ ಬೇಡರು ನಿಶ್ಶಸ್ತ್ರೀಕರಣ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ. ಸಿಪಾಯಿಗೆ ಕಪಾಳಕ್ಕೆ ಹೊಡೆದು ಕಳುಹಿಸುತ್ತಾರೆ. ಈ ದುಃಖದ ಸುದ್ದಿ ತಿಳಿದು ಬ್ರಿಟಿಷ್ ಅಧಿಕಾರಿ ಸಿಟ್ಟಿನಿಂದ ಕುದುರೆಯೊಂದಿಗೆ ಸೈನಿಕರನ್ನು ಹಲಗಲಿಯ ಮೇಲೆ ಕಳುಹಿಸುತ್ತಾನೆ. ಆ ಸಂದರ್ಭದಲ್ಲಿ ಬ್ರಿಟಿಷ್ ಸೈನಿಕರು ಮತ್ತು ಹಲಗಲಿಯ ಹೋರಾಟಗಾರರ ನಡುವೆ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭೀಕರ ಯುದ್ಧ ನಡೆಯುತ್ತದೆ. ಸಿಕ್ಕ ಸಿಕ್ಕ ಜನರ ಮೇಲೆ ಕರುಣೆಯಿಲ್ಲದ ಹಾಗೆ ಬ್ರಿಟಿಷ್ ಸೈನ್ಯ ಗುಂಡು ಹಾರಿಸುತ್ತದೆ. ಹೆಬಲಕ್ ಸಾಹೇಬ ಬಂದು ಬುದ್ಧಿಮಾತು ಹೇಳುತ್ತಾನೆ. ಆದರೂ ಇವನ ಮಾತನ್ನು ನಂಬಲಿಲ್ಲ ಇವರು ಘಾತುಕರು ಎನ್ನುತ್ತಾ ಹೆಬಲಕ್ ಸಾಹೇಬರಿಗೆ ಗುಂಡು ಹೊಡೆದು ಕೊಲ್ಲುತ್ತಾರೆ. ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುತ್ತದೆ. ಈ ಕಾರಣದಿಂದ ಕಾರ ಸಾಹೇಬ ದೊಡ್ಡ ದಂಡನ್ನು ಹಲಗಲಿಗೆ ಕರೆಸಿಕೊಂಡು ಹಲಗಲಿಯ ಮೇಲೆ ದಾಳಿ ಮಾಡಿಸುತ್ತಾನೆ. ಹಲಗಲಿಯ ಹೋರಾಟಗಾರರು ಮುನ್ನೂರು, ಐನೂರು, ಸಾವಿರ ಮಂದಿಗೆ ಒಬ್ಬೊಬ್ಬರು ಎದುರಾಗಿ ನಿಲ್ಲುತ್ತಾರೆ. ಕುದುರೆಗಳನ್ನು ಕಡಿಯುತ್ತಾರೆ. ರಕ್ತದ ಕಾಲುವೆಯೇ ಹರಿಯುತ್ತದೆ. ಹೀಗೆ ಹೋರಾಡುತ್ತಲೇ ವೀರಮರಣ ಹೊಂದುತ್ತಾರೆ. ಬ್ರಿಟಿಷ್ ಸೈನ್ಯ ಸಿಕ್ಕದ್ದನ್ನೆಲ್ಲ ದೋಚಿಕೊಂಡು ಹಲಗಲಿಯನ್ನು ಸುಟ್ಟು ಗುರುತುಳಿಯದಂತೆ ಮಾಡುತ್ತಾರೆ.<br>**ಅಥವಾ**<br>೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರಕಾರ ಭಾರತೀಯರ ಮೇಲೆ 'ನಿಶ್ಶಸ್ತ್ರೀಕರಣ' ಆದೇಶವನ್ನು ಹೊರಡಿಸಿತು. ಆಯುಧಗಳಿಲ್ಲದೆ ಬದುಕು ನಡೆಸುವುದು ಕಷ್ಟ ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನು ಕೊಡಲೊಪ್ಪದೆ ಪ್ರಮುಖವಾಗಿ ಬಾಲ, ಹನುಮ, ಜಡಗ, ಭೀಮ ಇವರು ಹಲಗಲಿಯ ಬೇಡರನ್ನೆಲ್ಲ ಒಟ್ಟುಗೂಡಿಸಿ ತಾವೇ ಮುಂದೆ ನಿಂತು ಜೀವ ಹೋದರೂ ಶಸ್ತ್ರಾಸ್ತ್ರ ಒಪ್ಪಿಸೆವು ಎಂದು ಹೋರಾಟಕ್ಕೆ ಸನ್ನದ್ಧರಾಗುತ್ತಾರೆ. ಆದೇಶ ತಂದ ಕಂಪನಿ ಸರಕಾರದ ಸಿಪಾಯಿಯನ್ನು ಬೇಡರು ಹೊಡೆಯುತ್ತಾರೆ. ಈ ಸುದ್ದಿ ಸಾಹೇಬರಿಗೆ ತಲುಪಿ ಕೋಪದಿಂದ ದಂಡು ಕಳಿಸಿ ಹಲಗಲಿಯ ಮೇಲೆ ಗುಂಡಿನ ಮಳೆಗರೆದರು. ಬೆನ್ನುಹತ್ತಿ ಹೊಡೆದರು. ನಿಷ್ಕರುಣೆಯಿಂದ ಕೊಂದು ಹಾಕುತ್ತಾರೆ. ಕೋಪಗೊಂಡ ಬ್ರಿಟಿಷ್ ಅಧಿಕಾರಿ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹಲಗಲಿಯನ್ನು ಲೂಟಿ ಮಾಡಲು ಆದೇಶ ನೀಡುತ್ತಾನೆ. ಧೈರ್ಯದಿಂದ ಎದೆಗುಂದದೆ ಸಾವಿರ ಸಾವಿರ ಬ್ರಿಟಿಷರ ಸೈನಿಕರನ್ನು ಹಲಗಲಿಯ ಬೇಡರು ಎದುರಿಸುತ್ತಾರೆ. ಧೈರ್ಯದಿಂದ ಎದೆಗುಂದದೆ ವೀರಾವೇಶದಿಂದ ಹೋರಾಡಿ ವೀರಮರಣ ಹೊಂದುತ್ತಾರೆ. ಇಷ್ಟಕ್ಕೆ ಸುಮ್ಮನಾಗದ ಬ್ರಿಟಿಷ್ ಸೈನಿಕರು ದಿನಬಳಕೆಯ ವಸ್ತುಗಳನ್ನು ಬಿಡದೆ ದೋಚಿಕೊಂಡು ಊರಿಗೆ ಕೊಳ್ಳಿ ಇಟ್ಟು ಹಲಗಲಿಯನ್ನು ಬೂದಿ ಮಾಡಿ ಬಿಡುತ್ತಾರೆ. ಹೀಗೆ ಬ್ರಿಟಿಷ್ ಸರ್ಕಾರ ಹಲಗಲಿ ಬೇಡರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿತು. | |
| **XIII.**<br><br>43. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು ):**<br>ವೇಳೆಯ ಅಪವ್ಯಯ ಅಂಬೇಡ್ಕರರಿಗೆ ಅಪರಾಧವಾಗಿ ಕಾಣುತ್ತಿತ್ತು. ಒಂದು ಕ್ಷಣವನ್ನೂ ಅವರು ಅಪವ್ಯಯ ಮಾಡುತ್ತಿರಲಿಲ್ಲ. ವ್ಯಾಪಾರಿಗೆ ವೇಳೆ ಎಂದರೆ ಹಣ. ಅಂಬೇಡ್ಕರರಿಗೆ ವೇಳೆ ಎಂದರೆ ಜ್ಞಾನಾರ್ಜನೆ. ತಮ್ಮ ಬದುಕಿನ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದ ನಮ್ಮ ಕಾಲದ ಇಬ್ಬರು ಮಹನೀಯರೆಂದರೆ ಒಬ್ಬರು ಗಾಂಧೀಜಿ ಮತ್ತೊಬ್ಬರು ಅಂಬೇಡ್ಕರರು. ಕಳೆದ ಕ್ಷಣ ಕಳೆದೇ ಹೋಗುತ್ತದೆಂಬ ಅರಿವು ಅವರದಾಗಿತ್ತು. ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಹೇಗೋ ಹಾಗೆ ಹಿಂತಿರುಗಿ ಸಾರ್ವಜನಿಕ ಜೀವನದಲ್ಲಿ ತೊಡಗಿದ ಮೇಲೆಯೂ ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು. ಅನೇಕ ಸಲ ರಾತ್ರಿಯುದ್ದಕ್ಕೂ ಅವರು ಓದು ಬರೆಹಗಳಲ್ಲಿ | **1 × 4 = 4**<br>**( 2 + 2 )** |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತೊಡಗಿರುತ್ತಿದ್ದುದ್ದುಂಟು. ಅವರ ನೆಚ್ಚಿನ ನಾಯಿ ಬೆಳಗಿನ ನೇವರಿಕೆಗಾಗಿ ಬಂದು ಕಾಲಬಳಿ ಸುಳಿದಾಗಲೆ ರಾತ್ರಿ ಕಳೆದುಹೋದ ಅರಿವು ಅವರಿಗಾದದ್ದುಂಟು. ರಾತ್ರಿ ಮನೆಗೆ ಹೋಗುತ್ತೇನೆಂದು ಹೇಳಿ ಹೊರಟುಹೋದ ಕಾರ್ಯದರ್ಶಿ ಬೆಳಗಿನಲ್ಲಿ ಮತ್ತೆ ಬಂದಾಗ ಮನೆಗೇಕೆ ಇನ್ನೂ ಹೋಗಲಿಲ್ಲ ಎಂದು ಕೇಳಿದ್ದುಂಟು. ಅಂಥ ಏಕಾಗ್ರತೆಯ ಓದು ಬರೆಹ ಅವರದು. ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.<br>**ಪ್ರಶ್ನೆಗಳು**<br>ಅ) ಅಂಬೇಡ್ಕರರ ಜ್ಞಾನದಾಹ ಹೇಗಿತ್ತು ?<br>ಬ) ಅಂಬೇಡ್ಕರರು ತಮ್ಮ ಬಿಡುವಿನ ಸಮಯವನ್ನು ಹೇಗೆ ಕಳೆಯುತ್ತಿದ್ದರು ?<br>**ಉತ್ತರ :**<br>ಅ) ಅಂಬೇಡ್ಕರರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.<br>ಬ) ಅಂಬೇಡ್ಕರರು ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ[redacted] ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು. ಅನೇಕ ಸಲ ರಾತ್ರಿಯುದ್ದಕ್ಕೂ ಅವರು ಓದು ಬರೆಹಗಳಲ್ಲಿ ತೊಡಗಿರುತ್ತಿದ್ದುದ್ದುಂಟು. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **XIV.** | **ಪತ್ರ ಲೇಖನ ಬರೆಯುವುದು** | **1 × 5 = 5** |
| 44. | ನಿಮ್ಮನ್ನು ಧಾರವಾಡದ ನಿವಾಸಿ ಹರ್ಷಿತಾ ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಿಕೊಡುವಂತೆ ಕೋರಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ ಅಥರ್ವ ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ವಿವರಿಸಿ, ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಿದ್ಧಾಂತ್ ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | ವ್ಯಾವಹಾರಿಕ / ಮನವಿ ಪತ್ರ | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಗೆಳೆಯನಿಗೆ ಪತ್ರ* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XV.** | **ಪ್ರಬಂಧ ಬರೆವಣಿಗೆ** [redacted] | **1 × 5 = 5** |
| 45. | ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯರ ಸಾಧನೆ. | |
| | **ಅಥವಾ** | |
| | ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |

# ಭಾರತದ ಸಂವಿಧಾನ

## ಪೀಠಿಕೆ

ಭಾರತದ ಪ್ರಜೆಗಳಾದ ನಾವು
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ.
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

Printing Address
Karnataka State Marketing Communication & Advertising Limited
MCA House, 42, Millers Road, Bengaluru - 560 001

**ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳವರ ಕಛೇರಿ**
ಜಿಲ್ಲಾಡಳಿತ ಭವನ, ರಾಷ್ಟ್ರೀಯ ಹೆದ್ದಾರಿ–75, ಟಮಕ ಅಂಚೆ, ಕೋಲಾರ –563103